ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 9
ಜುಲೈ 2023

SHRIDEVI ANTARANGA
Monthly Magazine




SHRIDEVI
EDUCATION



ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಪಶ್ಚಿಮ ಬಂಗಾಳದಲ್ಲಿ ಹದಿನಾಲ್ಕು ವರ್ಷ ಮುಖ್ಯಮಂತ್ರಿಯಾಗಿದ್ದ ಡಾ.ಬಿ.ಸಿ. ರಾಯ್ ಕಠಿಣ ಪರಿಸ್ಥಿತಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯವನ್ನು ಮುನ್ನಡೆಸಿದ ಕೀರ್ತಿ ಪಡೆದಿದ್ದಾರೆ.

## ಶಾಲಾ ಪಠ್ಯಪುಸ್ತಕದಲ್ಲಿ ಏನಿರಬೇಕು?



ಯಾವುದೇ ಹೊಸ ಸರ್ಕಾರ ಅಧಿಕಾರಕ್ಕೆ ಬರಲಿ, ಅದರ ಮೊದಲ ಕೆಲಸ, ಶಾಲಾ ಶಿಕ್ಷಣದಲ್ಲಿ ಪಠ್ಯ ಬದಲಾವಣೆ ಮಾಡುವುದು ಎಂದು ಜನಪ್ರತಿನಿಧಿಗಳು ಭಾವಿಸಿಕೊಂಡು ಬಿಟ್ಟಿದ್ದಾರೆ. ಈ ಪಠ್ಯ ಏನಿರಬೇಕು ಎಂಬುದನ್ನು ನುರಿತ ಅಧ್ಯಾಪಕರು, ಮಕ್ಕಳ ತಂದೆ-ತಾಯಿ, ಸಮಾಜದ ಸಮಕಾಲೀನ ವಿಚಾರಗಳಲ್ಲಿ ಆಸಕ್ತಿಯಿರುವ ತಜ್ಞರು ನಿರ್ಣಯಿಸಬೇಕಾದ ವಿಚಾರವೆಂದು ಈ ತನಕ ಆಳುವವರು ಯೋಚಿಸುವುದೇ ಇಲ್ಲ. ಈಗಿನ ಸರ್ಕಾರಗಳು ಪಠ್ಯಪುಸ್ತಕದ ವಿಚಾರದಲ್ಲಿ ತಲೆ ಕೆಡಿಸಿಕೊಂಡಷ್ಟು, ಜನಸಾಮಾನ್ಯರ ವಿಚಾರದಲ್ಲಿ ಚಿಂತಿಸುವುದಿಲ್ಲ. ಇದೊಂದು ದುರ್ದೈವದ ವಿಚಾರ.

ಎಡ-ಬಲಗಳ ವಿಚಾರಗಳಲ್ಲದೆ ಮಕ್ಕಳ ಜ್ಞಾನಾಭಿವೃದ್ಧಿಗೆ ಅನುಕೂಲವಾಗುವ ಅನೇಕ ವಿಚಾರಗಳಿದ್ದು, ಅವುಗಳನ್ನು ಪಠ್ಯ ವಿಷಯಗಳನ್ನಾಗಿಸುವ ಬಗ್ಗೆ ಯಾರೂ ಚಿಂತಿಸುತ್ತಿಲ್ಲ. ಮಕ್ಕಳಿಗೆ ಈಗಿನ ವಿಚಾರದ ಜೊತೆ ಉತ್ತಮ ವೈದ್ಯ, ಕೃಷಿಕ ಹಾಗೂ ಉದ್ಯಮಿಗಳ ಪರಿಚಯ ಆಗಬೇಕಾಗಿದೆ. ಇವರ ಸಾಧನೆಯೂ ಮಕ್ಕಳಿಗೆ ಪ್ರೇರಣೆ ಕೊಡುತ್ತದೆ. ಅಂತಹ ಒಂದು ವಿಚಾರವನ್ನು ನಿಮ್ಮೊಡನೆ ಇಂದು ಹಂಚಿಕೊಳ್ಳಬಯಸುತ್ತೇನೆ.

ಭಾರತದ ವೈದ್ಯಕೀಯ ಜಗತ್ತು ಮರೆಯದ, ಆದರೆ ದೇಶದ ಶ್ರೀಸಾಮಾನ್ಯರಿಗೆ ಅಪರಿಚಿತವಾಗಿರುವ ರಾಷ್ಟ್ರಪ್ರೇಮಿ, ವೈಜ್ಞಾನಿಕ ಚಿಂತನೆಗೆ ಸಾಕ್ಷಿಯಾಗಿರುವ, 'ಭಾರತರತ್ನ' ಡಾ. ಬಿಧಾನ್ ಚಂದ್ರರಾಯ್ ಅವರನ್ನು ಕುರಿತು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇವರನ್ನು ಭಾರತದ ಆಧುನಿಕ ವೈದ್ಯಲೋಕದ ಪಿತಾಮಹ ಎಂದೆಲ್ಲಾ ಕರೆಯುತ್ತಾರೆ. ಶ್ರೀಯುತರು 1882ರ ಜುಲೈ 1ರಂದು ಜನಿಸುತ್ತಾರೆ. 1962ರ ಜುಲೈ 1ರಂದು ನಿಧನರಾಗುತ್ತಾರೆ. ಅವರು ನಿಧನರಾದ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾಗಿದ್ದರು. ಎಂದಿನಂತೆ ಸಂಜೆ ತಮ್ಮ ಕ್ಲಿನಿಕ್‌ನಲ್ಲಿ ಪೇಶೆಂಟ್ ನೋಡಿ ಮನೆಗೆ ಬಂದು ಭಗವದ್ಗೀತೆ ಪಠಣ ಮಾಡಿದ ನಂತರ ಅವರು ತಮ್ಮ ಇಹಲೋಕ ವ್ಯಾಪಾರ ಮುಗಿಸುತ್ತಾರೆ. ಬದುಕಿನ ಕೊನೆಯ ಉಸಿರಿರುವ ತನಕ ಕರ್ತವ್ಯವನ್ನು ನಿರ್ವಹಿಸಿದ ಕರ್ಮಯೋಗಿ ಅವರು.

ಪಶ್ಚಿಮ ಬಂಗಾಳದಲ್ಲಿ ಹದಿನಾಲ್ಕು ವರ್ಷ ಮುಖ್ಯಮಂತ್ರಿಯಾಗಿದ್ದ ಡಾ.ಬಿ.ಸಿ. ರಾಯ್ ಕಠಿಣ ಪರಿಸ್ಥಿತಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯವನ್ನು ಮುನ್ನಡೆಸಿದ ಕೀರ್ತಿ ಪಡೆದಿದ್ದಾರೆ.

ಶ್ರೀಯುತರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ಕೋಮುಗಲಭೆ, ಆಹಾರದ ಅಭಾವ, ನಿರುದ್ಯೋಗ, ಅನಾರೋಗ್ಯ ಮೊದಲಾದ ಅನೇಕ ಸಮಸ್ಯೆಗಳು ಆ ರಾಜ್ಯವನ್ನು ಕಾಡುತ್ತಿದ್ದವು. ಸ್ವಾತಂತ್ರ್ಯ ಬಂದ ತರುಣದಲ್ಲಿ ಡಾ. ರಾಯ್ ತಾವು ವೈದ್ಯವೃತ್ತಿಗೆ ಮರಳುತ್ತೇನೆ ಎಂದಾಗ ಮಹಾತ್ಮ ಗಾಂಧೀಜಿ ಅವರೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹುದ್ದೆ ಒಪ್ಪಿಕೊಳ್ಳುವಂತೆ ಅವರಿಗೆ ಸೂಚಿಸುತ್ತಾರೆ. ಮಹಾತ್ಮರ ಮಾತಿಗೆ ಎದುರು ಹೇಳದೆ ಮುಖ್ಯಮಂತ್ರಿ ಹುದ್ದೆ ಒಪ್ಪಿಕೊಂಡು, ಅನೇಕ ಸಮಸ್ಯೆಗಳಿಂದ ತತ್ತರಿಸುತ್ತಿದ್ದ ಪಶ್ಚಿಮ ಬಂಗಾಳ ರಾಜ್ಯಕ್ಕೆ ಸ್ಥಿರತೆ ನೀಡಿದರು.

ನಾಯಕರು ವೈಯಕ್ತಿಕ ಸರಳತೆಯನ್ನು ಅನುಸರಿಸುವುದರ ಮೂಲಕ ಜನರ ವಿಶ್ವಾಸವನ್ನು ಗಳಿಸಿಕೊಳ್ಳಬಹುದು ಎಂಬ ಆದರ್ಶ ನಡೆಯನ್ನು ಡಾ.ಬಿ.ಸಿ.ರಾಯ್ ಹಾಕಿಕೊಟ್ಟಿದ್ದಾರೆ. ಅವರು ಹಾಕಿಕೊಟ್ಟ ಪರಂಪರೆ ಇಂದಿಗೂ ಪಶ್ಚಿಮ ಬಂಗಾಳದ ರಾಜಕಾರಣಿಗಳಲ್ಲಿರುವುದನ್ನು ಕಾಣಬಹುದು.

▸▸ 2ನೇ ಪುಟಕ್ಕೆ...



1992ರಲ್ಲಿ ಮೊದಲ ಬಾರಿಗೆ ಆರಂಭಗೊಂಡ ಈ ಸಪ್ತಾಹವನ್ನು 120ಕ್ಕೂ ಹೆಚ್ಚು ದೇಶಗಳಲ್ಲಿ ಪ್ರತಿವರ್ಷ ಆಗಸ್ಟ್ 1ರಿಂದ 7ರವರೆಗೆ ಜಾಗತಿಕವಾಗಿ ನಡೆಸಲಾಗುತ್ತದೆ.

■ ಡಾ.ರೇಖಾ ಗುರುಮೂರ್ತಿ
ಸ್ತ್ರೀರೋಗ ತಜ್ಞೆ
ಹಾಗೂ ಉಪ ಪ್ರಾಂಶುಪಾಲರು
ಶ್ರೀದೇವಿ ವೈದ್ಯಕೀಯ ಕಾಲೇಜು



## ವಿಶ್ವ ಸ್ತನ್ಯಪಾನ ಸಪ್ತಾಹ

ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಪ್ರಪಂಚದಾದ್ಯಂತ ಪ್ರತಿವರ್ಷ ಆಗಸ್ಟ್ ಮೊದಲ ವಾರದಲ್ಲಿ ಆಚರಿಸಲಾಗುತ್ತದೆ. 1992ರಲ್ಲಿ ಮೊದಲ ಬಾರಿಗೆ ಆರಂಭಗೊಂಡ ಈ ಸಪ್ತಾಹವನ್ನು 120ಕ್ಕೂ ಹೆಚ್ಚು ದೇಶಗಳಲ್ಲಿ ಪ್ರತಿವರ್ಷ ಆಗಸ್ಟ್ 1ರಿಂದ 7ರವರೆಗೆ ಜಾಗತಿಕವಾಗಿ ನಡೆಸಲಾಗುತ್ತದೆ.

ವಿಶ್ವ ಸ್ತನ್ಯಪಾನ ಸಪ್ತಾಹ ಎಂಬುದು ಸ್ತನ್ಯಪಾನಕ್ಕೆ ಸಂಬಂಧಿಸಿದಂತೆ ಜಾಗೃತಿ ಮೂಡಿಸಲು ಮತ್ತು ಕ್ರಿಯೆಯನ್ನು ಉತ್ತೇಜಿಸುವ ಜಾಗತಿಕ ಅಭಿಯಾನವಾಗಿದೆ. ಸರ್ಕಾರದ ನೀತಿ ನಿರೂಪಕರು, ಡಬ್ಲ್ಯುಹೆಚ್‌ಒ, ಯುನಿಸೆಫ್ (WHO, UNICEF) ಮತ್ತು ಇತರ ಸಂಘ-ಸಂಸ್ಥೆಗಳು ಒಟ್ಟಾಗಿ ಸೇರಿ ಆಗಸ್ಟ್ 1990ರಲ್ಲಿ ಇನ್ನೋಸೆಂಟಿ ಘೋಷಣೆಗೆ (Innocenti Declaration) ಸಹಿ ಹಾಕಿದವು. ಇನ್ನೋಸೆಂಟಿ ಘೋಷಣೆಯ ನೆನಪಿಗಾಗಿ ಇದನ್ನು ಆಚರಿಸಲಾಗುತ್ತದೆ.



ಇನ್ನೋಸೆಂಟಿ ಘೋಷಣೆಯು ಎಲ್ಲಾ ಮಹಿಳೆಯರಿಗೆ ಸ್ತನ್ಯಪಾನದ ಮಹತ್ವವನ್ನು ಮನವರಿಕೆ ಮಾಡಿಕೊಡುವ ಅಭಿಯಾನ ಪ್ರಾರಂಭಿಸಿತು. ಎಲ್ಲಾ ಶಿಶುಗಳಿಗೆ 4-6 ತಿಂಗಳವರೆಗೆ ಎದೆ ಹಾಲಿನ ಜೊತೆ ಪ್ರತ್ಯೇಕವಾದ ಆಹಾರವನ್ನು ನೀಡಬೇಕು. ತಾಯಿ, ಮಗುವಿನ ಆರೋಗ್ಯ ಹಾಗೂ ಅವರ ಪೌಷ್ಟಿಕತೆಗೆ ಅನುಕೂಲವಾಗುವಂತೆ ಮಗುವಿಗೆ ಆಹಾರ ನೀಡುವ ಅಗತ್ಯವನ್ನು ಹೇಳಲಾಯಿತು. ಇದೊಂದು ಜಾಗತಿಕ ಗುರಿಯಾಗಿದೆ. ಜಾಗೃತಿಯ ಮೂಲಕ ಇದಕ್ಕೆ ಸೂಕ್ತ ಬೆಂಬಲದ ವಾತಾವರಣ ರೂಪಿಸಬೇಕಾಗಿದೆ.

ಆರೋಗ್ಯದ ವ್ಯವಸ್ಥೆಗಾಗಿ ಕೆಲಸದ ಸ್ಥಳ ಮತ್ತು ಸಮುದಾಯದೊಳಗೆ ಸ್ತನ್ಯಪಾನಕ್ಕಿರುವ ಅಡೆತಡೆಗಳನ್ನು ತೊಡೆದುಹಾಕಬೇಕು. ಮಹಿಳೆಯರು ತಮ್ಮ ಮತ್ತು ಕುಟುಂಬದ ಉತ್ತಮ ಆರೋಗ್ಯಕ್ಕಾಗಿ ಸಾಕಷ್ಟು ಪೋಷಣೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಘೋಷಣೆ ಹೇಳುತ್ತದೆ. ಇಂತಹ ಉಪಕ್ರಮವು ಸ್ತನ್ಯಪಾನವನ್ನು ಉತ್ತೇಜಿಸುತ್ತದೆ. ತಾಯಿಯ ಹಾಲು ನವಜಾತ ಶಿಶುಗಳ ಆರೋಗ್ಯವನ್ನು ಸುಧಾರಿಸಲು ಮತ್ತು ಮಗುವಿಗೆ ಪ್ರತಿರಕ್ಷಣಾ ವ್ಯವಸ್ಥೆ ಬಲಪಡಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ. ಇಂತಹ ಪ್ರಯತ್ನಗಳು ಶಿಶು ಹಾಗೂ ತಾಯಿಯ ಆರೋಗ್ಯ ರಕ್ಷಣೆಗೆ ಹೆಚ್ಚಿನ ಪ್ರಯೋಜನವನ್ನು ಒದಗಿಸುತ್ತವೆ. ಘೋಷಣೆಯು ಬಡತನ ನಿವಾರಣೆ ಮತ್ತು ಆಹಾರ ಭದ್ರತೆಯ ಮೇಲೆ ಕೇಂದ್ರೀಕೃತವಾಗಿದೆ. ಶಿಶುಗಳ ಆರೋಗ್ಯವನ್ನು ಸುಧಾರಿಸುವ ಹಾಗೂ ಯಾವುದೇ ಸಮಯದಲ್ಲಾದರೂ ಸ್ತನ್ಯಪಾನ ಮಾಡಿಸುವ ಮಹಿಳೆಯರ ಹಕ್ಕುಗಳನ್ನು ಉತ್ತೇಜಿಸುವ, ರಕ್ಷಿಸುವ ಮತ್ತು ಬೆಂಬಲಿಸುವ ಗುರಿಯನ್ನು ಹೊಂದಿದೆ.

ಸ್ತನ್ಯಪಾನವನ್ನು ಸಾರ್ವತ್ರಿಕ ಮಟ್ಟಕ್ಕೆ ಹೆಚ್ಚಿಸುವುದರಿಂದ ಪ್ರತಿವರ್ಷ 7,00,000ಕ್ಕಿಂತ ಹೆಚ್ಚಿನ ಶಿಶುಗಳ ಜೀವವನ್ನು ಉಳಿಸಬಹುದು. ಇದರಲ್ಲಿ ಬಹುಪಾಲು ಆರು ತಿಂಗಳೊಳಗಿನ ಶಿಶುಗಳಿಗೆ ತುಂಬಾ ಸಹಾಯವಾಗುತ್ತದೆ.

### ಸ್ತನ್ಯಪಾನದ ಐದು ಮುಖ್ಯ ಪ್ರಯೋಜನಗಳು ಮಗುವಿಗೆ:

1. ಎದೆಹಾಲು ಮಗುವಿಗೆ ಪರಿಪೂರ್ಣ ಆಹಾರವಾಗಿದ್ದು, ಅಗತ್ಯವಿರುವ ಪೌಷ್ಟಿಕಾಂಶಗಳ ಆಗರವಾಗಿದೆ.
2. ಮಗು ಬೆಳೆದಂತೆ, ಎದೆಹಾಲು ಪೌಷ್ಟಿಕಾಂಶದ ಅಗತ್ಯಗಳನ್ನು ಪೂರೈಸುತ್ತದೆ. ಇದು ಪೋಷಕಾಂಶಗಳ ಸರಿಯಾದ ಸಮತೋಲನವನ್ನು ನೀಡುತ್ತದೆ ಹಾಗೂ ಮಗುವಿನ ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೆಚ್ಚಿಸುತ್ತದೆ.
3. ಸ್ತನ್ಯಪಾನವು ಅಲ್ಪಾವಧಿ ಮತ್ತು ದೀರ್ಘಾವಧಿಯ ಕಾಯಿಲೆ ಮತ್ತು ರೋಗಗಳ ವಿರುದ್ಧ ಶಿಶುಗಳನ್ನು ರಕ್ಷಿಸುತ್ತದೆ.
4. ಅಸ್ತಮಾ, ಬಾಲ್ಯದಲ್ಲಿ ಬೊಜ್ಜು, ಟೈಪ್1 ಮಧುಮೇಹ ತಡೆಯಲು, ಅಲರ್ಜಿ ತಡೆಯಲು ಮತ್ತು 'ಶಿಶು ಮರಣ ಸಿಂಡ್ರೋಮ್' (Sudden Infant Death Syndrome -SIDS) ಅಪಾಯವನ್ನು ಕಡಿಮೆ ಮಾಡುತ್ತದೆ. ಸ್ತನ್ಯಪಾನ ಮಾಡುವ ಮಕ್ಕಳಿಗೆ ಕಿವಿ ಮತ್ತು ಹೊಟ್ಟೆಯ ಸೋಂಕು ಬರುವ ಸಾಧ್ಯತೆ ಕಡಿಮೆ ಇರುತ್ತದೆ.
5. ಎದೆಹಾಲು ಮಗುವಿಗೆ ತಾಯಿಯಿಂದ ಪ್ರತಿಕಾಯಗಳನ್ನು ಹಂಚಿಕೊಳ್ಳಲು ಸಹಾಯ ಮಾಡುತ್ತದೆ. ಈ ಪ್ರತಿಕಾಯಗಳು ಶಿಶುಗಳಿಗೆ ಸಕ್ರಿಯವಾಗಿ ಪ್ರತಿರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ಅನಾರೋಗ್ಯದಿಂದ ರಕ್ಷಿಸಲು ಸಹಾಯ ಮಾಡುತ್ತದೆ.

### ತಾಯಂದಿರಿಗೆ

1. ತಾಯಂದಿರು ಯಾವುದೇ ಸಮಯದಲ್ಲಿ ಮತ್ತು ಎಲ್ಲಿಯಾದರೂ ತಮ್ಮ ಮಗುವಿಗೆ ಸ್ತನ್ಯಪಾನ ಮಾಡಿಸಬಹುದು.
2. ಸ್ತನ್ಯಪಾನ ಮಾಡಿಸುವ ಸಂಪ್ರದಾಯವನ್ನು ತಾಯಂದಿರು ಅಭ್ಯಾಸ ಮಾಡಿಕೊಂಡರೆ, ಹಾಲಿನ ಬಾಟಲಿಗಳನ್ನು ಸಿದ್ಧಪಡಿಸುವ ಗೋಜಿಗೆ ಹೋಗುವ ಅಗತ್ಯವಿರುವುದಿಲ್ಲ. ಯಾವುದೇ ಅಡ್ಡಿಯಿಲ್ಲದೆ ಸಾಮಾನ್ಯ ದಿನಚರಿಗೆ ಅಡ್ಡಿಯಾಗದಂತೆ ಮಗುವಿಗೆ ಸ್ತನ್ಯಪಾನ ಮಾಡಿಸಬಹುದು.
3. ಸ್ತನ್ಯಪಾನವು ತಾಯಿಯ ಸ್ತನ, ಅಂಡಾಶಯ, ಗರ್ಭಾಶಯದ ಕ್ಯಾನ್ಸರ್, ಟೈಪ್2 ಮಧುಮೇಹ ಮತ್ತು ಅಧಿಕ ರಕ್ತದೊತ್ತಡದ ಅಪಾಯಗಳನ್ನು ಕಡಿಮೆ ಮಾಡುತ್ತದೆ.
4. ಸ್ತನ್ಯಪಾನ ಮಾಡಿಸುವ ತಾಯಂದಿರಿಗೆ ಹೆಚ್ಚುವರಿಯಾಗಿ 500 ಕಿಲೋಕ್ಯಾಲರಿಗಳ ಉತ್ತಮ ಆಹಾರ ಬೇಕಾಗುತ್ತದೆ.

▸▸ 2ನೇ ಪುಟಕ್ಕೆ...

# ಶಾಲಾ ಪಠ್ಯಪುಸ್ತಕದಲ್ಲಿ ಏನಿರಬೇಕು?

◀◀ ...ಮೊದಲನೇ ಪುಟದಿಂದ

ಡಾ.ಬಿ.ಸಿ.ರಾಯ್ ಅವರ ಮಹತ್ವವಿರುವುದು ಅವರು ಜನಸಾಮಾನ್ಯರಲ್ಲಿ ಆಧುನಿಕ ವೈದ್ಯಕೀಯ ವಿಚಾರದಲ್ಲಿ ಮೂಡಿಸಿದ ನಂಬಿಕೆಯಿಂದ ಎನ್ನಬಹುದು. ಡಾ. ರಾಯ್ ಲಂಡನ್‌ನಲ್ಲಿ ಎಂ.ಆರ್.ಸಿ.ಪಿ. ಮತ್ತು ಎಫ್.ಆರ್.ಸಿ.ಎಸ್ ಪದವಿಗಳನ್ನು ಪಡೆದು ಭಾರತಕ್ಕೆ ಬಂದು ಕಲ್ಕತ್ತದ ಸಾರ್ವಜನಿಕ ಆಸ್ಪತ್ರೆಗಳಲ್ಲೂ ಕೆಲಸ ಮಾಡುತ್ತಾರೆ. ಕಲ್ಕತ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುತ್ತಾರೆ. ಮಹಾತ್ಮ ಗಾಂಧೀಜಿ ಅವರನ್ನು ಒಲಿಸಿಕೊಂಡು, ಅವರಿಗೆ ಚಿಕಿತ್ಸೆ ನೀಡಿದ ಹೆಗ್ಗಳಿಕೆ ಡಾ.ರಾಯ್ ಅವರದು. ಅವರ ಕಾಲದಲ್ಲಿ ಆಸ್ಪತ್ರೆಗಳಿಗೆ ಮಹಿಳೆಯರು ಬರುತ್ತಿರಲಿಲ್ಲ. ಮನೆಯಲ್ಲೇ ಹೆರಿಗೆಗಳಾಗುತ್ತಿದ್ದವು. ಆಗ ಎರಡು ಲಕ್ಷ ಹೆರಿಗೆಯಾದಲ್ಲಿ ವೈದ್ಯಕೀಯ ನೆರವಿಲ್ಲದ ಕಾರಣ ಸಾವಿರ ಮಕ್ಕಳು ಮರಣ ಹೊಂದುತ್ತಿದ್ದವು. ಇಂದು ಆ ಪ್ರಮಾಣ 97ಕ್ಕೆ ಇಳಿದಿದೆ. ಅಷ್ಟರಮಟ್ಟಿಗೆ ವೈದ್ಯಕೀಯ ಸಕಾರಾತ್ಮಕವಾಗಿ ಬೆಳವಣಿಗೆಯಾಗಿದೆ.

ಡಾ.ಬಿ.ಸಿ.ರಾಯ್ ಅವರು ನರ್ಸಿಂಗ್ ವೃತ್ತಿಯನ್ನು ಕೈಗೊಳ್ಳಲು ಮಹಿಳೆಯರಿಗೆ ಪ್ರೇರಣೆ ನೀಡಿದರು. ಅವರ ಸಲಹೆಯಂತೆ ಭಾರತ ಸರ್ಕಾರ ನರ್ಸಿಂಗ್ ಟ್ರೈನಿಂಗ್ ಮಾಡುವ ಮಹಿಳೆಯರಿಗೆ ಅನೇಕ ರೀತಿಯ ಪ್ರೋತ್ಸಾಹಗಳನ್ನು ಕೊಟ್ಟಿತು. ಅದರಿಂದ ಮಹಿಳೆಯರು ನರ್ಸಿಂಗ್ ವೃತ್ತಿಗೆ ದಾಖಲೆಯ ಸಂಖ್ಯೆಯಷ್ಟು ಬಂದರು. ಅದರಿಂದ ಭಾರತದ ಆರೋಗ್ಯ ಕ್ಷೇತ್ರಕ್ಕೆ ಆದ ಪ್ರಯೋಜನ ನೂರಾರು. ಅವರುಗಳೇ ದೇಶದಲ್ಲಿ ಸಾಂಕ್ರಾಮಿಕ ರೋಗಗಳನ್ನು ಹತೋಟಿಗೆ ತಂದರು. ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸಿನಲ್ಲಿ ಅರೆ ವೈದ್ಯಕೀಯ ಸಿಬ್ಬಂದಿಯ ಕೊಡುಗೆಯನ್ನು ಮರೆಯುವಂತಿಲ್ಲ.

ಡಾ.ರಾಯ್ ಅವರ ಇಂತಹ ಚಿಂತನೆ ಇನ್ನೂ ಅನೇಕ. ಅವರು ದೇಶದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಹೊಸ ರೂಪ ಕೊಟ್ಟಿರುವ 'ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ' ಮತ್ತು ವೈದ್ಯಕೀಯ ವೃತ್ತಿ ಮಾಡುವವರು ತಮ್ಮ ಕಷ್ಟಸುಖಗಳನ್ನು ಹಂಚಿಕೊಳ್ಳುವುದಕ್ಕಾಗಿ 'ಇಂಡಿಯನ್ ಮೆಡಿಕಲ್ ಅಸೋಸಿಯೇಷನ್' ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದಾರೆ. ಅವುಗಳ ಅಧ್ಯಕ್ಷರಾಗಿ ಈ ಸಂಸ್ಥೆಗಳಿಗೆ ಸ್ಪಷ್ಟ ರೂಪ ಕೊಟ್ಟಿದ್ದರು. ಉತ್ತಮ ವೈದ್ಯರನ್ನು ಹೇಗೆ ರೂಪಿಸಬೇಕು ಎಂಬುದನ್ನು ಅವರು ಅನೇಕ ಸಲ ಹೇಳಿದ್ದಾರೆ.

ಡಾ. ಬಿ.ಸಿ.ರಾಯ್ ಅವರ ವೈಜ್ಞಾನಿಕ ಮನೋಧರ್ಮಕ್ಕೆ ಉದಾಹರಣೆಯೊಂದನ್ನು ಕೊಡಬಹುದು. 1925ರಲ್ಲಿ ಕಲ್ಕತ್ತದ ಪ್ರಾಂತೀಯ ಶಾಸನಸಭೆಗೆ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಆಗವರು ಖಾಸಗಿ ನಿರ್ಣಯವೊಂದನ್ನು ಮಂಡಿಸಿದ್ದಾರೆ. ಆ ವಿಷಯ ಹೀಗಿದೆ.

“ಮಾನ್ಯ ಸಭಾಧ್ಯಕ್ಷರೇ, ಇಂದು ಹೂಗ್ಲಿ ನದಿ ತುಂಬಾ ಕಲುಷಿತಗೊಂಡಿದೆ. ಈ ನದಿಯ ನೀರನ್ನು ಕುಡಿಯುವುದಕ್ಕೂ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಭವಿಷ್ಯದಲ್ಲಿ ಅದರ ಬಳಕೆ ಇನ್ನೂ ಹೆಚ್ಚಬಹುದು. ಈ ನದಿಯನ್ನು ಈಗ ನಾವು ಸಂರಕ್ಷಣೆ ಮಾಡದಿದ್ದರೆ ಈ ನೀರನ್ನು ಸೇವಿಸುವ ಜನರು ಅನಾರೋಗ್ಯಕ್ಕೆ ತುತ್ತಾಗುವುದು ನಿಶ್ಚಯ. ಸರ್ಕಾರ ತಕ್ಷಣ ಹೂಗ್ಲಿ ಸಂರಕ್ಷಣೆಯ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು”. ಹೆಚ್ಚು ಕಡಿಮೆ ಶತಮಾನದಷ್ಟು ಹಿಂದೆ ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ವೈದ್ಯರಲ್ಲದೇ ಬೇರೆಯವರು ಚಿಂತಿಸಲು ಸಾಧ್ಯವೇ?

ಬನಾರಸ್ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಭಾಷಣದಲ್ಲೂ ಡಾ.ಬಿ.ಸಿ.ರಾಯ್ ದೇಶದ ಯುವಜನತೆ ಕರ್ತವ್ಯಗಳೇನು ಎಂಬುದನ್ನು ಸವಿಸ್ತಾರವಾಗಿ ಹೇಳಿದ್ದಾರೆ. ಬ್ರಹ್ಮಚಾರಿಯಾಗಿದ್ದ ಡಾ.ಬಿ.ಸಿ.ರಾಯ್ ತಮ್ಮ ಎಲ್ಲಾ ದುಡಿಮೆಯನ್ನು ಒಗ್ಗೂಡಿಸಿ ತಮ್ಮ ತಾಯಿ ಹೆಸರಿನಲ್ಲಿ 'ಅಘೋರಕಾಮಿನಿ ಆಸ್ಪತ್ರೆ'ಯನ್ನು ಪ್ರಾರಂಭಿಸುತ್ತಾರೆ. ಅವರು ಅನೇಕ ಆಸ್ಪತ್ರೆಗಳ ಪ್ರಾರಂಭಕ್ಕೆ ಕಾರಣಕರ್ತರಾಗಿದ್ದಾರೆ. ಅದರಲ್ಲಿ ಕ್ಯಾನ್ಸರ್ ಆಸ್ಪತ್ರೆಯೂ ಇದೆ. ಅವರದು ಶಿಸ್ತು ಬದ್ಧ ಜೀವನ. ಮಹಾತ್ಮ ಗಾಂಧೀಜಿ ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದವರು.

ಡಾ. ಬಿ.ಸಿ.ರಾಯ್ ಅವರ ವೈಜ್ಞಾನಿಕ ಚಿಂತನೆಗೆ ಅನೇಕ ಉದಾಹರಣೆಗಳಿವೆ. ಅದೇ ತ್ಯಾಗ ಜೀವನಕ್ಕೂ ಹತ್ತಾರು ಪ್ರಸಂಗಗಳಿವೆ. ಜುಲೈ 1ನೆಯ ತಾರೀಖು ಅವರ ಜನ್ಮದಿನವನ್ನು ಭಾರತದ ಎಲ್ಲಾ ಕಡೆ 'ರಾಷ್ಟ್ರೀಯ ವೈದ್ಯರ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಡಾ.ಬಿ.ಸಿ.ರಾಯ್ ಅವರ ಜನ್ಮದಿನದಂದು, ದೇಶದಲ್ಲಿ ಹಗಲಿರುಳು ಜನರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಲಕ್ಷಾಂತರ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳ ವಿಚಾರದಲ್ಲಿ ಸಕಾರಾತ್ಮಕ ಭಾವನೆ ತಳೆಯಬೇಕಾಗಿದೆ. ಪ್ರತಿದಿನ ವೈದ್ಯರ ಮೇಲೆ ಹಲ್ಲೆ ನಡೆಯುವ ವಿಚಾರವನ್ನು ಮಾಧ್ಯಮಗಳು ಬಿತ್ತರಿಸುತ್ತಿವೆ. Save for Saver's ಎನ್ನುವ ಕೂಗು ಎಲ್ಲೆಡೆ ಕೇಳಿಬರುತ್ತಿದೆ.

ಕೋವಿಡ್ ಸಂದರ್ಭದಲ್ಲಿ ರೋಗಿಯ ರಕ್ತಸಂಬಂಧಿಗಳೇ ಐ.ಸಿ.ಯು.ಗೆ ಬರಲು ಹೆದರಿ ಆಸ್ಪತ್ರೆಗೆ ದೂರದಲ್ಲಿ ನಿಂತಿದ್ದರು. ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳು ಕೋವಿಡ್ ಕಿಟ್ ಧರಿಸಿ ಧೈರ್ಯದಿಂದ ಐ.ಸಿ.ಯು.ಗೆ ಹೋದ ನೂರಾರು ಸನ್ನಿವೇಶಗಳಿವೆ. ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ, ಕೋವಿಡ್ ಪೀಡಿತರಾಗಿದ್ದ ಸಾವಿರಕ್ಕೂ ಹೆಚ್ಚಿನ ರೋಗಿಗಳ ಪ್ರಾಣ ಉಳಿಸಲಾಗಿದೆ. ಎಷ್ಟೋ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳು ನಾವು ಐ.ಸಿ.ಯು.ನಲ್ಲಿ ಕೆಲಸ ಮಾಡುತ್ತಿದ್ದೇವೆ, ಮನೆಗೆ ಹೋದರೆ ನಮ್ಮ ಹೆಂಡತಿ, ಮಕ್ಕಳು ಮತ್ತು ಸಂಬಂಧಿಕರಿಗೆ ಸೋಂಕು ತಗುಲಬಹುದು ಎಂಬ ಅಳುಕಿನಿಂದ ಎಷ್ಟೋ ದಿನ ಮನೆಗೆ ಹೋಗಲಿಲ್ಲ. ಅನೇಕ ಯುವ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳು ಕೋವಿಡ್‌ಗೆ ಬಲಿಯಾದ ದೃಶ್ಯವನ್ನು ಕಂಡ ನನಗೆ ಅವರ ಕುಟುಂಬಕ್ಕೆ ನಾಗರಿಕ ಸಮಾಜ ಸಾಂತ್ವನ ಹೇಳಲಿಲ್ಲವಲ್ಲ ಎಂಬ ಕೊರಗು ಇದೆ. 'ವೈದ್ಯರು ಆಯಾಯ ಸಮಾಜದ ಅಮೂಲ್ಯ ನಿಧಿ' ಎಂಬ ಭಾವನೆ ಬರುವ ತನಕ ದೊಡ್ಡ ಮನಸ್ಸನ್ನು ನಿರೀಕ್ಷೆ ಮಾಡುವಂತಿಲ್ಲ.

ಆ ವಿಚಾರಗಳು ಒತ್ತಟ್ಟಿಗೆ ಇರಲಿ. ಈಗ ನಾವು ಗಮನಿಸಬೇಕಾದ ವಿಚಾರವೆಂದರೆ, ದೇಶದಲ್ಲಿನ ಮಕ್ಕಳಿಗೆ ಶಾಲಾ ದಿನಗಳಿಂದಲೇ ಡಾ.ಬಿ.ಸಿ.ರಾಯ್ ಪರಿಚಯವಾದರೆ ಅವರಿಗೆ ಬದುಕಿನಲ್ಲಿ ಒಳ್ಳೆಯ ಸ್ಫೂರ್ತಿ ದೊರೆಯುತ್ತದೆ. ಈಗ ಮಕ್ಕಳಿಗೆ ಆದರ್ಶಗಳನ್ನು ಕೆಲವೇ ಕ್ಷೇತ್ರದಿಂದ ಆಯ್ದ ವ್ಯಕ್ತಿಗಳ ಮೂಲಕ ತಿಳಿಸಲಾಗುತ್ತಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಅದರಲ್ಲೂ ವೈಜ್ಞಾನಿಕ ಪ್ರಜ್ಞೆಯಿಂದ ಕೆಲಸ ಮಾಡಿದ ಡಾ.ಬಿ.ಸಿ.ರಾಯ್ ಅವರಂತಹ ವ್ಯಕ್ತಿಗಳನ್ನು ಪಠ್ಯ ಪುಸ್ತಕದ ಮೂಲಕ ಪರಿಚಯಿಸಿದರೆ ಮಕ್ಕಳಿಗೆ ಹೆಚ್ಚು ಲಾಭವಾಗುತ್ತದೆ.

ಎನ್.ಸಿ.ಇ.ಆರ್.ಟಿ. (National Council of Educational Research and Training) ಮತ್ತು ಡಿ.ಸಿ.ಇ.ಆರ್.ಟಿ. (Department of State Educational Research and Training) ಗಳಂತಹ ಶೈಕ್ಷಣಿಕ ಸಂಸ್ಥೆಗಳು ಈ ದಿಸೆಯಲ್ಲಿ ಚಿಂತಿಸುವ ಅಗತ್ಯವಿದೆ.

■ **ನಿರೂಪಣೆ: ಶ್ರೀವತ್ಸ**

# ವಿಶ್ವ ಸ್ತನ್ಯಪಾನ ಸಪ್ತಾಹ

◀◀ ...ಮೊದಲನೇ ಪುಟದಿಂದ

ಇದು ತಾಯಂದಿರು ಗರ್ಭಾವಸ್ಥೆಯಲ್ಲಿ ಕಳೆದುಕೊಂಡ ತೂಕ ಮತ್ತು ದೇಹದ ಆಕಾರವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತದೆ.



5. ಹಾಲುಣಿಸುವ ಸಮಯದಲ್ಲಿ ತಾಯಂದಿರು ಆಕ್ಸಿಟೋಸಿನ್ ಎಂಬ ಹಾರ್ಮೋನ್ (Hormone Oxytocin) ಬಿಡುಗಡೆ ಮಾಡುತ್ತಾರೆ. ಇದು ತಾಯಿ ಮತ್ತು ಮಗುವಿನ ನಡುವಿನ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಇದು ಬೆಳೆಯುತ್ತಿರುವ ಶಿಶುಗಳಿಗೆ ತಾಯಿಯೊಡನೆ ಭಾವನಾತ್ಮಕ ಸಂಬಂಧವನ್ನು ಸ್ಥಿರಗೊಳಿಸುತ್ತದೆ.

ಅಮೆರಿಕಾದ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (American Academy of Pediatrics) ಸಂಸ್ಥೆ ತಾಯಿ ಮತ್ತು ಶಿಶುವಿಗೆ ಸ್ತನ್ಯಪಾನದ ಮಹತ್ವವನ್ನು ಸಮರ್ಥವಾಗಿ ಪ್ರತಿಪಾದಿಸಿದೆ. ಮಗು ಜನಿಸಿದ ಮೊದಲ ಆರು ತಿಂಗಳ ಕಾಲ ವಿಶೇಷವಾಗಿ ಹಾಲುಣಿಸುವಿಕೆಯ ಅಗತ್ಯವನ್ನು ಸಂಸ್ಥೆ ತನ್ನ ಶಿಫಾರಸುಗಳಲ್ಲಿ ಹೇಳಿದೆ. ನಂತರ ಕನಿಷ್ಠ ಒಂದು ವರ್ಷ ಮತ್ತು ಎರಡು ವರ್ಷಗಳವರೆಗೆ ಅಥವಾ ಅದಕ್ಕೂ ಹೆಚ್ಚಿನ ಕಾಲ ಪೂರಕ ಆಹಾರಗಳನ್ನು ಪರಿಚಯಿಸುವ ತನಕ ಸ್ತನ್ಯಪಾನವನ್ನು ಮುಂದುವರಿಸುವಂತೆ ಅಮೆರಿಕಾದ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಸೂಚಿಸುತ್ತದೆ.

### ಸುವರ್ಣ ಸಮಯ

ಮಗು ಜನಿಸಿದ ಮೊದಲ ಗಂಟೆಯೊಳಗೆ ಸ್ತನ್ಯಪಾನವು ತಾಯಿಯ ಕೊಲೊಸ್ಟ್ರಮ್‌ನ (Mother's Colostrum) ಪ್ರಯೋಜನ ಪಡೆಯಲು ಅನುವು ಮಾಡಿಕೊಡುತ್ತದೆ. ಹಾಲು ಬಿಡುಗಡೆಯಾಗುವ ಮೊದಲು ಉತ್ಪತ್ತಿಯಾಗುವ ಪೋಷಕಾಂಶ ತುಂಬಿದ ದ್ರವವು, ಮಗುವಿಗೆ ಹೊಸದಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೆಚ್ಚಿಸಲು ಮತ್ತು ಸೋಂಕುಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.

ತಾಯಿ ತನ್ನ ನವಜಾತ ಶಿಶುವಿನೊಂದಿಗೆ ಅಡೆತಡೆಯಿಲ್ಲದ ಚರ್ಮದಿಂದ ಚರ್ಮದ ಸಂಪರ್ಕವನ್ನು ಹೊಂದಿದ್ದು, ಜನನದ ನಂತರದ ಮೊದಲ ಗಂಟೆಯನ್ನು “ಗೋಲ್ಡನ್ ಅವರ್” (Golden Hour) ಎಂದು ಕರೆಯಲಾಗುತ್ತದೆ.

ಕಳೆದ ಒಂಬತ್ತು ತಿಂಗಳು ನಿಯಂತ್ರಿತ ವಾತಾವರಣದಲ್ಲಿ ಕಳೆದಿದ್ದ ನವಜಾತ ಶಿಶುವಿಗೆ ಜನನದ ತಕ್ಷಣದ ಅವಧಿ ನಿರ್ಣಾಯಕವಾಗಿರುತ್ತದೆ. ಈ ಗೋಲ್ಡನ್ ಅವರ್ ಮಗುವಿನ ತಾಪಮಾನ ಮತ್ತು ಉಸಿರಾಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಹಾಗೂ ಕಡಿಮೆ ರಕ್ತದೊತ್ತಡದ ಅಪಾಯವನ್ನು ಕಡಿಮೆ ಮಾಡುತ್ತದೆ.

ಶೇಕಡ 41.6ರಷ್ಟು ಶಿಶುಗಳು ಗೋಲ್ಡನ್ ಅವರ್‌ನಲ್ಲಿ ಹಾಲುಣ್ಣುತ್ತವೆ. ಸಿಸೇರಿಯನ್ ಹೆರಿಗೆ ಮತ್ತು ನವಜಾತ ಶಿಶುವಿನ ಆರೈಕೆಯ ಕಾರಣದಿಂದ ಮಗುವನ್ನು ತಕ್ಷಣವೇ ಸ್ಥಳಾಂತರಿಸಲಾಗುತ್ತದೆ.

ಗೋಲ್ಡನ್ ಅವರ್‌ನಲ್ಲಿ ಎದೆ ಹಾಲು ಉಣಿಸುವುದರಿಂದಾಗುವ ಪ್ರಯೋಜನಗಳ ಬಗ್ಗೆ ಪ್ರಸೂತಿ ತಜ್ಞರು, ಶಿಶು ವೈದ್ಯರು ಹಾಗೂ ಶುಶ್ರೂಷಾ ಸಿಬ್ಬಂದಿಗಳಿಗೆ ಸೀಮಿತವಾದ ಅರಿವಿದೆ. ಅದಕ್ಕಾಗಿ ಈ ಲೇಖನದ ಮೂಲಕ ಅವರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲಾಗಿದೆ. ಗೋಲ್ಡನ್ ಅವರ್‌ನಲ್ಲಿ ನವಜಾತ ಶಿಶುವಿಗೆ ಹಾಲು ಉಣಿಸಲು ಆರೋಗ್ಯ ಸಿಬ್ಬಂದಿಗೆ ವಿನಂತಿಸಲಾಗುತ್ತಿದೆ.

ಈ ವರ್ಷ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಗಸ್ಟ್ 1ರಿಂದ 7ರವರೆಗೆ ಆಚರಿಸಲಾಗುತ್ತದೆ. ಈ ವರ್ಷದ ಥೀಮ್ ಎಂದರೆ 'ವರ್ಲ್ಡ್ ಅಲೈಯನ್ಸ್ ಫಾರ್ ಬ್ರೆಸ್ಟ್ ಫೀಡಿಂಗ್ ಆ್ಯಕ್ಷನ್' (World Alliance for Breastfeeding Action -WABA). ಅದರ ಕನ್ನಡ ಅನುವಾದ ಹೀಗಿದೆ: “ಸ್ತನ್ಯಪಾನವನ್ನು ಸಕ್ರಿಯಗೊಳಿಸುವುದು: ಉದ್ಯೋಗಸ್ಥ ತಾಯಂದಿರಿಗೆ ಬದಲಾವಣೆ ತರುತ್ತದೆ.”

### ಈ ವರ್ಷದ ಥೀಮ್ ಉದ್ದೇಶವೆಂದರೆ:

- ಉದ್ಯೋಗಸ್ಥ ಮಹಿಳೆಯರು ಸ್ತನ್ಯಪಾನ ಮಾಡಿಸದಿರಲು ಅಥವಾ ಶಿಫಾರಸು ಮಾಡಿದ ಸಮಯಕ್ಕಿಂತ ಮುಂಚೆಯೇ ಸ್ತನ್ಯಪಾನ ಮಾಡಿಸುವುದನ್ನು ನಿಲ್ಲಿಸಲು ಕೆಲಸದ ಸ್ಥಳದಲ್ಲಿನ ಸವಾಲುಗಳು ಕಾರಣಗಳಾಗಿವೆ.
- ಸ್ತನ್ಯಪಾನ ಮಾಡಿಸಲು ತಾಯಿಗೆ ಸಾಕಷ್ಟು ಸಮಯ ಮತ್ತು ಸಹಕಾರ ಬೇಕಾಗುತ್ತದೆ.
- ಮೂರು ತಿಂಗಳಿಗಿಂತ ಕಡಿಮೆ ಮಾತೃತ್ವ ರಜೆ ಹೊಂದಿರುವ ತಾಯಿ ಮೂರು ಅಥವಾ ಅದಕ್ಕಿಂತ ಹೆಚ್ಚು ತಿಂಗಳ ರಜೆ ಹೊಂದಿರುವವರಿಗಿಂತ ಕಡಿಮೆ ಹಾಲುಣಿಸುವ ಅವಧಿ ಪಡೆದಿರುತ್ತಾರೆ.
- ಸ್ತನ್ಯಪಾನ–ಸ್ನೇಹಿಯಾಗಲು ಕೆಲಸದ ಸ್ಥಳದಲ್ಲಿ ಸ್ತನ್ಯಪಾನಕ್ಕೆ ಸಾಕಷ್ಟು ಸೌಲಭ್ಯಗಳ ಅಗತ್ಯವಿದೆ. ವಿಶ್ವದಲ್ಲಿ ಕೇವಲ 42 ದೇಶಗಳು ಕೆಲಸದ ಸ್ಥಳದಲ್ಲಿ ಹಾಲುಣಿಸುವ ಸೌಲಭ್ಯವನ್ನು ಕಡ್ಡಾಯಗೊಳಿಸಿವೆ.
- ಸ್ತನ್ಯಪಾನವನ್ನು ರಕ್ಷಿಸುವುದು, ಉತ್ತೇಜಿಸುವುದು ಮತ್ತು ಬೆಂಬಲಿಸುವುದು ಸುಸ್ಥಿತ ಅಭಿವೃದ್ಧಿಯ ಹಾದಿಯಲ್ಲಿ ನಿಂತಿರುವ ಅಸಮಾನತೆಗಳನ್ನು ಪರಿಹರಿಸುತ್ತದೆ.

ಪ್ರಮುಖ ಸ್ತನ್ಯಪಾನ ಸೂಚಕಗಳ ಅಂಕಿ ಅಂಶಗಳ ಪ್ರಕಾರ ಕಳೆದ ಆರು ತಿಂಗಳಲ್ಲಿ ಕೇವಲ ಶೇಕಡ 55.6ರಷ್ಟು ಶಿಶುಗಳಿಗೆ ಹಾಲುಣಿಸಲಾಗುತ್ತಿದೆ. ಅದರಲ್ಲಿ ಮೂರು ತಿಂಗಳವರೆಗೆ ವಿಶೇಷ ಹಾಲುಣಿಸುವಿಕೆಯು ಕೇವಲ ಶೇಕಡ 45.3 ರಷ್ಟು ಇದೆ. ಕೇವಲ ಶೇಕಡ 35.9ರಷ್ಟು ಮಹಿಳೆಯರು ಒಂದು ವರ್ಷದ ಕೊನೆಯವರೆಗೆ ತಮ್ಮ ಶಿಶುಗಳಿಗೆ ಹಾಲುಣಿಸುವುದನ್ನು ಮುಂದುವರಿಸುತ್ತಾರೆ ಎನ್ನಲಾಗಿದೆ. 2023ರ ವಿಶ್ವ ಸ್ತನ್ಯಪಾನ ಸಪ್ತಾಹ ಸಂದರ್ಭದಲ್ಲಿ, ನಾವು ಭಾರತದಲ್ಲಿ ಸ್ತನ್ಯಪಾನದ ಈ ನೀರಸ ಅಂಕಿ ಅಂಶಗಳನ್ನು ಎತ್ತಿ ತೋರಿಸಬೇಕಿದೆ. ಸ್ತನ್ಯಪಾನದ ಪ್ರಯೋಜನಗಳ ಬಗ್ಗೆ ದೊಡ್ಡ ಮಟ್ಟದಲ್ಲಿ ಅರಿವು ಮೂಡಿಸಬೇಕಿದೆ. ಭಾರತದ ಒಟ್ಟು ಉದ್ಯೋಗಿಗಳಲ್ಲಿ ಸುಮಾರು ಶೇಕಡ 33ರಷ್ಟಿರುವ ಭಾರತದ ದುಡಿಯುವ ಮಹಿಳೆಯರಲ್ಲಿ ಸ್ತನ್ಯಪಾನವನ್ನು ಉತ್ತೇಜಿಸಲು ಒಗ್ಗಟ್ಟಾಗಿ ಸಮಾಜ ಮತ್ತು ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

■ **ಕನ್ನಡಕ್ಕೆ: ಬಿ.ಎಂ.ಸುನೀತಾ**


**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**



ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್, ಉದ್ಯೋಗ ಮತ್ತು ತರಬೇತಿ ವಿಭಾಗದ ಅಧಿಕಾರಿಯಾದ ಪ್ರೊ.ಎಂ.ಅಂಜನ್‌ಮೂರ್ತಿ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು ಮತ್ತು ಬೋಧಕ ಬೋಧಕೇತರ ಸಿಬ್ಬಂದಿ ವರ್ಗ.

# ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ಲೇಸ್‌ಮೆಂಟ್ ಅಪ್ರಿಸಿಯೇಷನ್ ಡೇ

"ಯಾವುದೇ ಒಂದು ಇಂಜಿನಿಯರಿಂಗ್ ಕಾಲೇಜೊಂದರ ಸಾಮರ್ಥ್ಯ ಹಾಗೂ ಶ್ರೇಷ್ಠತೆ ನಿರ್ಧಾರವಾಗುವುದು ಆ ಕಾಲೇಜಿನ ಶೈಕ್ಷಣಿಕ ಫಲಿತಾಂಶ ಹಾಗೂ ಅಲ್ಲಿ ಪದವಿ ಗಳಿಸಿದವರಿಗೆ ದೊರೆತ ಕ್ಯಾಂಪಸ್ ಪ್ಲೇಸ್‌ಮೆಂಟ್‌ನಿಂದ ಎನ್ನಲಾಗುತ್ತದೆ. ವಿದ್ಯಾರ್ಥಿಗಳ ನಿರೀಕ್ಷೆ ಹಾಗೂ ಪೋಷಕರ ಅಭಿಲಾಷೆಗಳನ್ನು ಈಡೇರಿಸುವ ಸಾಮರ್ಥ್ಯಗಳನ್ನು ರೂಢಿಸಿಕೊಂಡಾಗ ಮಾತ್ರ ಇಂಜಿನಿಯರಿಂಗ್ ಕಾಲೇಜು ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ಗಟ್ಟಿಯಾಗಿ ಉಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ತುಮಕೂರಿನ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯವು ಕಳೆದ ಹಲವಾರು ವರ್ಷಗಳಿಂದ ಈ ಎರಡೂ ವಿಚಾರಗಳಲ್ಲಿ ತನ್ನ ಸಾಮರ್ಥ್ಯವನ್ನು ವೃದ್ಧಿಸಿಕೊಂಡು ಬರುತ್ತಿದೆ, ಇದೊಂದು ಸಮಾಧಾನದ ವಿಚಾರ. ಇದಕ್ಕೆ ಮುಖ್ಯ ಕಾರಣಕರ್ತರು ಇಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು. ಅವರನ್ನು ಅಭಿನಂದಿಸಿ ಇಂತಹ ಶೈಕ್ಷಣಿಕ ಸಾಧನೆ ಮಾಡಿರುವ ಎಲ್ಲಾ ವಿದ್ಯಾರ್ಥಿ ಬಂಧುಗಳನ್ನು ಅಭಿನಂದಿಸುತ್ತೇನೆ" ಎಂದು ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜೂನ್ 22ರಂದು ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗ ಗಳಿಸಿಕೊಂಡ ಎಲ್ಲಾ ಇಂಜಿನಿಯರಿಂಗ್ ಹಾಗೂ ಎಂ.ಬಿ.ಎ. ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ "ಪ್ಲೇಸ್‌ಮೆಂಟ್ ಅಪ್ರಿಸಿಯೇಷನ್ ಡೇ 2022-23" ಸಮಾರಂಭದಲ್ಲಿ ತಿಳಿಸಿದರು.

ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ 164 ವಿದ್ಯಾರ್ಥಿಗಳು ಉದ್ಯೋಗ ನೇಮಕಾತಿ ಪತ್ರ ಹಾಗೂ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದರು. ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಮಾತು ಮುಂದುವರಿಸಿ "ಇತ್ತೀಚೆಗೆ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ನ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿ ನಮ್ಮ ಇಂಜಿನಿಯರಿಂಗ್ ಕಾಲೇಜು ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳ ಪೈಕಿ ಶೇ.87ರಷ್ಟು ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿ ವಿವಿಧ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಪಡೆದುಕೊಂಡಿರುತ್ತಾರೆ. ಶೈಕ್ಷಣಿಕ ಅರ್ಹತೆಯುಳ್ಳ ವಿದ್ಯಾರ್ಥಿಗಳಲ್ಲಿ ಶೇ.95ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಂಡಿದ್ದಾರೆ. ಇದರಲ್ಲಿ ಶೇ.9ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಕನಿಷ್ಠ 6 ಕಂಪನಿಗಳ ಉದ್ಯೋಗ ನೇಮಕಾತಿ ಪತ್ರಗಳನ್ನು ಪಡೆದುಕೊಂಡಿದ್ದು, ಶೇ.24ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಕನಿಷ್ಠ 3 ಕಂಪನಿಗಳ ನೇಮಕಾತಿ ಪತ್ರಗಳನ್ನು ಪಡೆದುಕೊಂಡಿದ್ದಾರೆ. ನನಗೆ ಇದು ಅತ್ಯಂತ ಸಂತೋಷ ತಂದಿದೆ" ಎಂದರು.

ಈ ಬಾರಿ ಕಾಲೇಜಿಗೆ ಭೇಟಿ ನೀಡಿ ಕ್ಯಾಂಪಸ್ ಸಂದರ್ಶನದಲ್ಲಿ ಪಾಲ್ಗೊಂಡ ಎಲ್ಲಾ ಕಂಪನಿಗಳ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗೆ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್‌ರವರು ಕೃತಜ್ಞತೆ ತಿಳಿಸಿ, ಉದ್ಯೋಗ ನೇಮಕಾತಿ ಪಡೆದುಕೊಂಡ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಅವರು ಮಾತನಾಡುತ್ತಾ "ಈ ಸಾಲಿನಲ್ಲಿ ಹಿಂದೆಂದಿಗಿಂತಲೂ ಅತಿ ಹೆಚ್ಚು ಸಂಖ್ಯೆಯ ಕಂಪನಿಗಳು ಕ್ಯಾಂಪಸ್‌ಗೆ ಭೇಟಿ ನೀಡಿ ಕ್ಯಾಂಪಸ್ ಸಂದರ್ಶನವನ್ನು ಕೈಗೊಂಡಿವೆ. ಅವುಗಳ ಸಂಖ್ಯೆ 45 ಆಗಿರುವುದು ಸಂತಸದ ವಿಚಾರ. ಇವುಗಳ ಪೈಕಿ ವಾರ್ಷಿಕ 12 ಲಕ್ಷ ರೂಗಳ ಪ್ಯಾಕೇಜ್‌ನ್ನು ನಮ್ಮ ಕಾಲೇಜಿನ ವಿದ್ಯಾರ್ಥಿಯೊಬ್ಬರು ಪಡೆದುಕೊಂಡಿರುವುದು ಸಂತೋಷವಾಗಿದೆ. ಅದೇ ರೀತಿ ವಾರ್ಷಿಕ 6.75 ಲಕ್ಷರೂಗಳ ವೇತನವನ್ನು ಕಾಲೇಜಿನ 36 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಸರಾಸರಿ 5 ಲಕ್ಷಕ್ಕಿಂತಲೂ ಹೆಚ್ಚು ವೇತನವನ್ನು 67 ವಿದ್ಯಾರ್ಥಿಗಳು ಪಡೆದುಕೊಂಡಿರುವುದು ಕಾಲೇಜಿನ ಕ್ಯಾಂಪಸ್ ಪ್ಲೇಸ್‌ಮೆಂಟ್‌ನ ಪ್ರಮುಖ ಸಾಧನೆಯಾಗಿದೆ. ಮೂಲ ಇಂಜಿನಿಯರಿಂಗ್ ವಿಭಾಗಗಳಾದ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಕಂಪನಿಗಳಾದ HI-Q ಡಿಸೈನ್ ಅಂಡ್ ಡೀಟೈಲಿಂಗ್, ಗೋದ್ರೇಜ್, ಟಿ.ವಿ.ಎಸ್. ಅಂಡ್ ಸನ್ಸ್, ರ್‍ಯಾಮ್ಕೊಸಿಮೆಂಟ್ ಇನ್ನೂ ಮುಂತಾದ ಕಂಪನಿಗಳು ಕಾಲೇಜಿಗೆ ಭೇಟಿ ನೀಡಿ ಈ ವಿಭಾಗಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೈಕಿ ಶೇ.85ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ನೇರ ನೇಮಕಾತಿ ಮಾಡಿಕೊಂಡಿರುವುದು ಕಾಲೇಜಿನ ಹೆಗ್ಗಳಿಕೆಯಾಗಿದೆ" ಎಂದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಮಾತನಾಡುತ್ತಾ "ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳಾದ TCS, Infosys, Capgemini, Bosch, Quinnox Inc, Quest-Global, Mahindra Cognizant, Accord Global, First American, Turing minds, L & T Infotech, ADM North Field, Wipro NTT Data, HCL Technologes ಇತ್ಯಾದಿ ಕಂಪನಿಗಳು ಕಾಲೇಜಿನ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಗಳಿಗೆ ನೇಮಕಾತಿ ಮಾಡಿಕೊಂಡಿವೆ. ಕಾಲೇಜಿನ 164 ವಿದ್ಯಾರ್ಥಿಗಳು ವಿವಿಧ ಕಂಪನಿಗಳ ವಿವಿಧ ವೇತನಗಳ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ಈ ಸಾಧನೆಗೆ ನಿರಂತರ ತರಬೇತಿಯನ್ನು ವಿವಿಧ ಹಂತಗಳಲ್ಲಿ ಪರಿಣಿತರಿಂದ ನೀಡಲಾಗಿದ್ದು, ಶೈಕ್ಷಣಿಕ ಅರ್ಹತೆಯ ಜೊತೆಗೆ ಕ್ಯಾಂಪಸ್ ಆಯ್ಕೆಗೆ ಬೇಕಾದ ತರಬೇತಿಯನ್ನು ಕೊಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದಲ್ಲಾ ಒಂದು ಕಂಪನಿಯ ಉದ್ಯೋಗವನ್ನು ಪಡೆದುಕೊಳ್ಳುವಂತೆ ನೋಡಿಕೊಳ್ಳುವುದು ನಮ್ಮ ಸಂಸ್ಥೆಯ ಗುರಿ" ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಉದ್ಯೋಗ ಮತ್ತು ತರಬೇತಿ ವಿಭಾಗದ ಅಧಿಕಾರಿಯಾದ ಪ್ರೊ. ಎಂ.ಅಂಜನ್‌ಮೂರ್ತಿರವರು ಉಪಸ್ಥಿತರಿದ್ದರು.

### ಗರಿಷ್ಠ ಪ್ಯಾಕೇಜ್‌ನಿಂದ ಆಯ್ಕೆಯಾದವರು



ರವಿತೇಜ
(ISE First American Financial Corporation- 12 LPA)



ಸಂಜಯ್
(ECE Sonata Software - 7 LPA)



ರಕ್ಷಿತ್
(CSE Proxelera - 7 LPA )



ಮನು.ಎಸ್.ಎನ್.
(EEE -Power Research and Development Consultants - 4.5 LPA)

**ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳು ಇಂತಹ ಅವಕಾಶ ಪಡೆಯಲು ಶ್ರೀದೇವಿ ಸಂಸ್ಥೆಯಲ್ಲಿರುವ ಅಧ್ಯಾಪಕರು ಮತ್ತು ಅಲ್ಲಿನ ಮ್ಯಾನೇಜ್‌ಮೆಂಟ್ ಕಾರಣ ಎಂದು ಹೇಳಿ ಅವರಿಗೆ ಕೃತಜ್ಞತೆ ಅರ್ಪಿಸಿದರು.**

# ಲಿವರ್ ಬಳಿ ಥೈರಾಯ್ಡ್ ಅಂಗಾಂಶ ಪತ್ತೆಯಾಗಿದ್ದ ಚಿಕಿತ್ಸಾ ಪ್ರಕರಣ

## ಅಂತರರಾಷ್ಟ್ರೀಯ ಐ.ಎಚ್.ಪಿ.ಬಿ.ಎ. ಸಮಾವೇಶದಲ್ಲಿ ಪ್ರಕರಣದ ಪ್ರಸ್ತುತಿ

ಫ್ರಾನ್ಸ್‌ನ ಲಿಯೋನ್‌ನಲ್ಲಿ ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಸಮಾವೇಶವೊಂದರಲ್ಲಿ ನಾನು ಭಾಗವಹಿಸಿದ್ದೆ. ಐ.ಎಚ್.ಪಿ.ಬಿ.ಎ. (IHPBA) ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮ ಇದಾಗಿತ್ತು. ಶ್ರೀದೇವಿ ಸಂಸ್ಥೆಯಲ್ಲಿ ನಾನು ನಿರ್ವಹಿಸಿದ್ದ ಚಿಕಿತ್ಸಾ ಪ್ರಕರಣವೊಂದರ ಮಹತ್ವ ಗುರುತಿಸಿ, ಅದರ ಬಗ್ಗೆ ಖುದ್ದು ಹಾಜರಾಗಿ ಸಮಾವೇಶದಲ್ಲಿ ಪ್ರಸ್ತುತಪಡಿಸಲು ಆಯೋಜಕ ಸಮಿತಿಯವರು ನನ್ನನ್ನು ಆಹ್ವಾನಿಸಿದ್ದರು.

ಹೆಪಟೋ ಪ್ಯಾಂಕ್ರಿಯಾಟೊ ಬೈಲರಿ ಸರ್ಜಿಕಲ್ ಕ್ಷೇತ್ರದಲ್ಲಿ ಹೆಸರಾಗಿರುವ ಮುಂಚೂಣಿ ಸಂಸ್ಥೆಯೊಂದರ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಪ್ರಕರಣವೊಂದನ್ನು ಪ್ರಸ್ತುತಪಡಿಸಲು ನನಗೆ ಸಿಕ್ಕ ಮೊತ್ತಮೊದಲ ಅವಕಾಶ ಇದು. ಇದು ನಿಜವಾಗಿಯೂ ಗೌರವ ಹಾಗೂ ಹೆಮ್ಮೆ ಮೂಡಿಸುವ ವಿಷಯ.



ಅಂದಹಾಗೆ, ಸಮಾವೇಶಕ್ಕೆ ಸ್ವೀಕೃತವಾಗಿದ್ದ ಪ್ರಕರಣದ ಹೆಸರು "ಎಕ್ಟೋಪಿಕ್ ಥೈರಾಯ್ಡ್ ಪ್ರೆಸೆಂಟಿಂಗ್ ಆ್ಯಸ್ ಎ ಸಿಸ್ಟ್ ಇನ್ ಪೋರ್ಟಾ ಹೆಪಟಿಸ್". ಈ ಬಾಧೆಯಿಂದ ಬಳಲುತ್ತಿದ್ದ ಮಹಿಳೆಯೊಬ್ಬರು ಹೊಟ್ಟೆನೋವು ಕಾಣಿಸಿಕೊಂಡಾಗ ನನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದರು. ತಪಾಸಣೆಗಳನ್ನು ನಡೆಸಿದ ಮೇಲೆ ಆಕೆಯ ಪಿತ್ತಕೋಶದ (ಲಿವರ್) ಬಳಿ, ಸರಿಯಾಗಿ ಹೇಳಬೇಕೆಂದರೆ, ಬೈಲ್ ಡಕ್ಟ್ ಬಳಿ ಆಕೆಗೆ ಒಂದು ಬಗೆಯ ಗಂಟು (ಬೊಕ್ಕೆ) ಇತ್ತು. ಈ ಗಂಟನ್ನು ತೆಗೆಯಲು ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ಗಂಟಿನ ಬೈಲ್ ಡಕ್ಟ್‌ಗೆ ಅಂಟಿಕೊಂಡಿದ್ದ ಭಾಗವನ್ನು ಕೂಡ ಶಸ್ತ್ರಚಿಕಿತ್ಸೆಯಿಂದ ತೆಗೆಯಲಾಯಿತು. ಡಕ್ಟ್‌ನ ಉಳಿದ ಭಾಗ ಕರುಳಿನ ಭಾಗಕ್ಕೆ ಅಂಟಿಕೊಂಡಿತ್ತು.

ಶಸ್ತ್ರಚಿಕಿತ್ಸೆ ಆದ ಮೇಲೆ ಆಕೆ ಉತ್ತಮವಾಗಿ ಚೇತರಿಸಿಕೊಂಡರು. ನಂತರ ಈ ಗಂಟು, ಥೈರಾಯ್ಡ್ ಅಂಗಾಂಶ ಎಂಬುದು ಪತ್ತೆಯಾಯಿತು. ಸಾಮಾನ್ಯವಾಗಿ ಥೈರಾಯ್ಡ್ ಕುತ್ತಿಗೆ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಎಕ್ಟೋಪಿಕ್ ಥೈರಾಯ್ಡ್ ಕುತ್ತಿಗೆ ಭಾಗದಲ್ಲಿ ಅಥವಾ ಎದೆ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ, ಥೈರಾಯ್ಡ್ ಅಂಗಾಂಶವು ಹೊಟ್ಟೆಯಲ್ಲಿ ಕಂಡುಬರುವುದು ಅಪರೂಪ. ಅದರಲ್ಲೂ, ಇದು ಬೈಲ್ ಡಕ್ಟ್ ಹತ್ತಿರ ಕಾಣಿಸಿಕೊಳ್ಳುವುದು ಅಪರೂಪದಲ್ಲಿ ಅಪರೂಪವಾಗಿರುತ್ತದೆ.

▶▶ 4ನೇ ಪುಟಕ್ಕೆ...





# ಸಾಧನೆಯ ಹಾದಿಯಲ್ಲಿ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ

ತುಮಕೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಶ್ರೀ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಕೂಡ ಒಂದು. 1992ರಲ್ಲಿ ತುಮಕೂರಿನ ಪ್ರಸಿದ್ಧ ಸರ್ಜನ್ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬ ಒಳ್ಳೆಯ ಉದ್ದೇಶದಿಂದ ಟ್ರಸ್ಟ್‌ವೊಂದನ್ನು ಸ್ಥಾಪಿಸಿದರು. ಇದರ ಅಡಿಯಲ್ಲಿ ಮೆಡಿಕಲ್, ಇಂಜಿನಿಯರಿಂಗ್, ನರ್ಸಿಂಗ್, ಪ್ಯಾರಾಮೆಡಿಕಲ್, ಫಾರ್ಮಸಿ, ಪಾಲಿಟೆಕ್ನಿಕ್, ಫಿಜಿಯೋಥೆರಪಿ, ಪದವಿ, ಸ್ನಾತಕೋತ್ತರ ಪದವಿ, ಐ.ಟಿ.ಐ. ಹಾಗೂ ವಿದ್ಯಾಮಂದಿರ ಮುಂತಾದ ವಿವಿಧ ಕಾಲೇಜುಗಳಲ್ಲಿ ವಿದ್ಯಾರ್ಜನೆಗೆ ಅವಕಾಶವಿದ್ದು ಅತ್ಯುನ್ನತ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ.

ಶ್ರೀ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಭಾಗವಾದ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯು ತುಮಕೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದ್ದು, ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿದೆ. ಪ್ರತಿಷ್ಠಿತ ಸಂಸ್ಥೆಯ ರಾಷ್ಟ್ರೀಯ ಹೆದ್ದಾರಿ–04 ಕ್ಕೆ ಹೊಂದಿಕೊಂಡಂತೆ ಒಟ್ಟು 30 ಎಕರೆ ಗ್ರೀನ್ ಕ್ಯಾಂಪಸ್‌ನಲ್ಲಿ ಬಿ.ಇ., ಎಂ.ಟೆಕ್, ಪಿ.ಎಚ್‌ಡಿ, ಎಂ.ಬಿ.ಎ. ಕೋರ್ಸ್‌ಗಳಲ್ಲಿ ಶಿಕ್ಷಣವನ್ನು ನೀಡುತ್ತಿದೆ.

ಕೋರ್ಸ್‌ಗಳು ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯವು ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಇನ್‌ಫರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ಕೋರ್ಸ್‌ಗಳು ಲಭ್ಯವಿವೆ. ಸ್ನಾತಕೋತ್ತರ ವಿಭಾಗದಲ್ಲಿ ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಎಂ.ಬಿ.ಎ ಕೋರ್ಸ್‌ಗಳು ಲಭ್ಯವಿರುತ್ತವೆ.

ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆ, ಶ್ರೀದೇವಿ ಆಸ್ಪತ್ರೆ 24X7 ಮಾದರಿಯ ಆಸ್ಪತ್ರೆಯಾಗಿದ್ದು ಎಲ್ಲ ಸ್ಪೆಷಾಲಿಟಿಯ ವೈದ್ಯರುಗಳಿದ್ದಾರೆ, ರೋಗಿಗಳಿಗೆ ಅತ್ಯುತ್ತಮ ವಿಶ್ವದರ್ಜೆ ಚಿಕಿತ್ಸೆ ದೊರೆಯುತ್ತಿದೆ. ಶ್ರೀದೇವಿ ಆಸ್ಪತ್ರೆಯಲ್ಲಿ ನರರೋಗ, ಹೃದಯದ ಕಾಯಿಲೆ, ಆರ್ಥೋಸ್ಕೋಪಿಕ್ಸ್ ಮತ್ತು ಲ್ಯಾಪರೋಸ್ಕೋಪಿ ಶಸ್ತ್ರಚಿಕಿತ್ಸೆ ಮೊದಲಾದವುಗಳಿಗೆ ಚಿಕಿತ್ಸೆ ನೀಡಲು ಪ್ರತ್ಯೇಕ ವಿಭಾಗಗಳಿರುತ್ತವೆ. ಎಂಡೋಸ್ಕೋಪ್ ಕೊಲೊನೋಸ್ಕೋಪಿ, ಐ.ವಿ.ಎಫ್, ಅತ್ಯಾಧುನಿಕ ಸ್ಕ್ಯಾನಿಂಗ್ ತಂತ್ರಜ್ಞಾನ, ಅಪಘಾತ ಮತ್ತು ತುರ್ತು ಚಿಕಿತ್ಸಾ ಘಟಕ ಸುಸಜ್ಜಿತ ಅಪರೇಷನ್ ಥಿಯೇಟರ್, ಅಂಬ್ಯುಲೆನ್ಸ್, ರಕ್ತನಿಧಿ, ಔಷಧಾಲಯಗಳು, ಪ್ರಯೋಗಾಲಯಗಳು, ಆರ್.ಟಿ.ಪಿ.ಸಿ.ಆರ್ ಪರೀಕ್ಷೆ, ರೇಡಿಯಾಲಜಿ ವಿಭಾಗ, ಕ್ಯಾಥ್ ಲ್ಯಾಬ್, 16 ಸ್ಲೈಸ್ ಸಿ.ಟಿ. ಸ್ಕ್ಯಾನಿಂಗ್, ಎಕ್ಸ್ ರೇ 3.0 ಟೆಸ್ಲಾ. ಎಂ.ಆರ್.ಐ. ಮುಂತಾದ ಸೇವೆಗಳನ್ನು ಶ್ರೀದೇವಿ ಆಸ್ಪತ್ರೆ ಈಗ ಜನರಿಗೆ ನೀಡುತ್ತಿದೆ.

ಶ್ರೀದೇವಿ ಶಿಕ್ಷಣ ಸಂಸ್ಥೆಯ ವತಿಯಿಂದ 'ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ' ವ್ಯವಸ್ಥಿತವಾಗಿ ನಡೆಯುತ್ತಿದ್ದು, ಈಗಾಗಲೇ ಐದು ಬ್ಯಾಚ್‌ಗಳಲ್ಲಿ ವಿದ್ಯಾರ್ಥಿ – ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸ ಮುಗಿಸಿ ಪದವಿ ಪಡೆದು ಹೊರಬಂದಿದ್ದಾರೆ.

ಶ್ರೀದೇವಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ವಿಶ್ವದ ವಿವಿಧ ದೇಶಗಳಲ್ಲಿ ರೋಗಿಗಳಿಗೆ ಸೇವೆ ನೀಡುತ್ತಿದ್ದಾರೆ. ಬಿ.ಎಸ್ಸಿ ನರ್ಸಿಂಗ್, ಜಿ.ಎನ್.ಎಂ, ಎಂ.ಎಸ್.ಸಿ. ನರ್ಸಿಂಗ್ ಕೋರ್ಸ್‌ಗಳು ಉತ್ತಮ ಫಲಿತಾಂಶವನ್ನು ಹೊಂದಿವೆ.

ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜು ಶ್ರೀದೇವಿ ವೈದ್ಯಕೀಯ ಲ್ಯಾಬ್ ತಂತ್ರಜ್ಞಾನ, ಡಯಾಲಿಸಿಸ್, ಅರಿವಳಿಕೆ, ಎಕ್ಸ್‌ರೇ, ಎಂ.ಆರ್.ಡಿ. ಹೆಲ್ತ್ ಇನ್ಸ್‌ಪೆಕ್ಟರ್, ಆಪ್ತಾಲ್ಮಾಲಜಿ, ಆಪರೇಷನ್ ಥಿಯೇಟರ್ ಟೆಕ್ನಾಲಜಿ, ನ್ಯೂರೋ, ರೆಸ್ಪಿರೇಟರಿ, ಇನ್ನೂ ಮುಂತಾದ ಕೋರ್ಸ್‌ಗಳನ್ನು ಹೊಂದಿರುತ್ತದೆ.

**ಶ್ರೀದೇವಿ ಫಿಸಿಯೋಥೆರಪಿ ಕಾಲೇಜು:** ಫಿಸಿಯೋಥೆರಪಿ ಜೊತೆಗೆ ಬಿ.ಪಿ.ಟಿ ಮತ್ತು ಎಂ.ಪಿ.ಟಿ. ಕೋರ್ಸ್‌ಗಳನ್ನು ಹೊಂದಿದೆ.

**ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜು:** ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಇನ್‌ಫರ್‌ಮೇಶನ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗಗಳಿದ್ದು ನುರಿತ ಶಿಕ್ಷಕ ವೃಂದದವರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ.

**ವಿಪುಲ ಉದ್ಯೋಗಾವಕಾಶಗಳು:** ತುಮಕೂರಿನ ವಸಂತನರಸಾಪುರ, ಅಂತರಸನಹಳ್ಳಿ ಕೈಗಾರಿಕಾ ಕೇಂದ್ರ, ಬೆಂಗಳೂರು ಪ್ರದೇಶಗಳಲ್ಲಿ ಈ ಸಂಸ್ಥೆಯ ವಿದ್ಯಾರ್ಥಿಗಳು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪ್ರತಿ ವರ್ಷ ನಡೆಯುವ ಕ್ಯಾಂಪಸ್ ಸಂದರ್ಶನದಲ್ಲಿ ನೂರಾರು ವಿದ್ಯಾರ್ಥಿಗಳು ಆಯ್ಕೆಯಾಗಿ ಉದ್ಯೋಗ ಪಡೆಯುತ್ತಿದ್ದಾರೆ.

**ಪದವಿ ಮತ್ತು ಸ್ನಾತಕೋತ್ತರ ಕೇಂದ್ರ:** ಸ್ನಾತಕೋತ್ತರ ವಿಭಾಗವು ಎಂ.ಕಾಂ., ಹಾಗೂ ಬಿ.ಕಾಂ.,ಬಿ.ಸಿ.ಎ ಪದವಿ ಕೋರ್ಸ್‌ಗಳನ್ನು ಒಳಗೊಂಡಿದೆ. ಉತ್ತಮವಾದ ಅಧ್ಯಾಪಕ ವೃಂದದವರಿಂದ ಗುಣಮಟ್ಟದ ತರಬೇತಿಯ ಜೊತೆಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗುತ್ತದೆ.

"ಉತ್ತಮ ಶಿಕ್ಷಣ ಕೊಡುವುದು ನಮ್ಮ ಧ್ಯೇಯವಾಕ್ಯವಾಗಿದೆ. ಅಪೂರ್ವ ಜ್ಞಾನದೊಂದಿಗೆ ವಿದ್ಯಾರ್ಥಿಗಳು ಸಮಾಜದಲ್ಲಿ ಉನ್ನತ ಸ್ಥಾನಗಳಿಗೆ ಏರಲು ಅವರನ್ನು ಸಜ್ಜುಗೊಳಿಸಲಾಗುತ್ತಿದೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕಾರ್ಯವನ್ನು ಸಂಸ್ಥೆ ಉತ್ತಮ ರೀತಿಯಲ್ಲಿ ಮಾಡುತ್ತಿದೆ. ನಮ್ಮಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ, ಕ್ರೀಡೆ, ಸಾಂಸ್ಕೃತಿಕ ವಿಭಾಗಗಳಲ್ಲಿ ಭಾಗವಹಿಸುತ್ತಿದ್ದಾರೆ. ಆ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತ ಮಾದರಿಯಾಗಿದ್ದಾರೆ. ಇದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ" ಎಂದು ಶ್ರೀದೇವಿ ಸಮೂಹ ಶಿಕ್ಷಣ ವಿದ್ಯಾಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿರುವ ಡಾ. ಎಂ.ಆರ್.ಹುಲಿನಾಯ್ಕರ್ ಅವರು ಅಭಿಪ್ರಾಯಪಡುತ್ತಾರೆ

**ಹೆಚ್ಚಿನ ಮಾಹಿತಿಗಾಗಿ: 7259011111. /9686114813/ 9686687351/ 9449863468/ 0816–2212666 ಸಂಪರ್ಕಿಸಬಹುದು.**

**Email: admission@shridevieducation.org**

**Website:http://www.shridevieducation.org**

▪ ವರದಿ: ಎನ್.ಆನಂದ

# ಅಂತಾರಾಷ್ಟ್ರೀಯ ಯೋಗ ದಿನಾಚರಣೆ

"ಯೋಗದಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ. ನಿತ್ಯ ಯೋಗಾಭ್ಯಾಸ ಮಾಡುವುದರಿಂದ ಉತ್ತಮ ಆರೋಗ್ಯಕರ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ. ದಿನವೂ ಸೂರ್ಯ ನಮಸ್ಕಾರ ಮಾಡುವುದರಿಂದ ದೇಹ ಮತ್ತು ಮನಸ್ಸು ಸ್ಥಿಮಿತದಲ್ಲಿರುತ್ತದೆ, ಮನಸ್ಸು ಮತ್ತು ದೇಹದ ಸ್ವಾಸ್ಥ್ಯಕ್ಕೆ ಯೋಗ ಪರಿಣಾಮಕಾರಿಯಾಗಿದೆ. ಪ್ರತಿಯೊಬ್ಬರೂ ಯೋಗಾಭ್ಯಾಸ ಮಾಡಬೇಕು, ಯೋಗಾಭ್ಯಾಸದಿಂದ ನಾವುಗಳು ದೀರ್ಘಕಾಲದವರೆಗೆ ಆರೋಗ್ಯವಂತರಾಗಿ ಬಾಳಬಹುದು. ಯೋಗದಲ್ಲಿ ಹಠಯೋಗ, ಅಷ್ಟಾಂಗ ವಿನ್ಯಾಸ ಯೋಗ, ಪವರ್ ಯೋಗ, ಪ್ರಾಣಾಯಾಮ ಮತ್ತು ಮುದ್ರೆ, ಧ್ಯಾನ ಮತ್ತು ಮಂತ್ರ ಮುಂತಾದ ವಿಭಾಗಗಳಿದ್ದು, ಅದನ್ನು ಗುರುವಿನಿಂದ ಕಲಿಯಬೇಕು' ಎಂದು ಜೂನ್ 21ರಂದು ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ 'ಅಂತಾರಾಷ್ಟ್ರೀಯ ಯೋಗ ದಿನಾಚರಣೆ'ಯ ಸಂದರ್ಭದಲ್ಲಿ ತುಮಕೂರಿನ ಯೋಗ ಶಿಕ್ಷಣ ತರಬೇತುದಾರರಾದ ಡಿ.ಅರುಣ್ ಕುಮಾರ್ ಅವರು ಅಭಿಪ್ರಾಯಪಟ್ಟರು.

ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಅವರು ಮಾತನಾಡುತ್ತಾ "ಇತ್ತೀಚಿನ ದಿನಗಳಲ್ಲಿ ಯೋಗವೂ ಪ್ರದರ್ಶನವಾಗುತ್ತಿದೆ. ಅದು ಬದುಕಿಗೆ ನಿದರ್ಶನವಾಗಬೇಕು, ನಾವುಗಳು ಯೋಗಾಭ್ಯಾಸ ಮಾಡುವುದರಿಂದ ಉತ್ತಮ ಆರೋಗ್ಯಕರ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ" ಎಂದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್ ಅವರು "ವ್ಯಕ್ತಿಯ ಮನಸ್ಸಿನಲ್ಲಿರುವ ಕಲ್ಮಷಗಳನ್ನು ಹೊರಹಾಕುವುದೇ ಯೋಗ. ಆದ್ದರಿಂದ ಯೋಗವು ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಗಬೇಕು. ಮನಸ್ಸು ಮತ್ತು ದೇಹದ ಸ್ವಾಸ್ಥ್ಯಕ್ಕೆ ಯೋಗ ಪರಿಣಾಮಕಾರಿಯಾಗಿದ್ದು, ಅದರಿಂದ ಪ್ರತಿಯೊಬ್ಬರೂ ಯೋಗಾಭ್ಯಾಸ ಮಾಡಬೇಕು" ಎಂದರು.




**ಚಿತ್ರದಲ್ಲಿ ತುಮಕೂರಿನ ಯೋಗ ಶಿಕ್ಷಣ ತರಬೇತುದಾರರಾದ ಡಿ.ಅರುಣ್ ಕುಮಾರ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಪ್ರೊ.ಮುಬಾರಕ್, ಡಾ.ಬಿ.ಎಸ್.ಲೋಕೇಶ್, ಆರ್. ವಿಜಯ್‌ಕುಮಾರ್, ರಾಘವೇಂದ್ರ ಜಟ್ಟೆಣ್ಣ, ಮತ್ತು ಲಕ್ಷ್ಮಿನಾರಾಯಣ್**

# ಲಿವರ್ ಬಳಿ ಥೈರಾಯ್ಡ್ ಅಂಗಾಂಶ ಪತ್ತೆಯಾಗಿದ್ದ ಚಿಕಿತ್ಸಾ ಪ್ರಕರಣ

◀◀ ...3ನೇ ಪುಟದಿಂದ

ಇದುವರೆಗೆ ಪ್ರಕಟವಾಗಿರುವ ಪ್ರಪಂಚದ ಚಿಕಿತ್ಸಾ ಪ್ರಕರಣಗಳ ಸಾಹಿತ್ಯದಲ್ಲಿ 10ನೇ ಪ್ರಕರಣ ಇದಾಗಿದೆ. ಶಸ್ತ್ರಚಿಕಿತ್ಸಕರು ಮತ್ತು ರೋಗಲಕ್ಷಣ ಶಾಸ್ತ್ರಜ್ಞರಿಗೆ ಇಂತಹ ಅಪರೂಪದ ಪರಿಸ್ಥಿತಿಯ ಬಗ್ಗೆ ತಿಳಿದಿದ್ದರೆ ತುಂಬಾ ಅನುಕೂಲವಾಗುತ್ತದೆ ಎಂಬುದನ್ನು ನಾನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಯಾವುದೇ ಚಿಕಿತ್ಸೆಯನ್ನು ಪ್ರಮಾಣೀಕೃತ ಶಿಷ್ಟಾಚಾರಕ್ಕೆ ಅನುಗುಣವಾಗಿ ನಡೆಸಿದರೆ ಅದಕ್ಕೆ ಮನ್ನಣೆ ಹಾಗೂ ಮೆಚ್ಚುಗೆ ಸಿಗುತ್ತದೆ ಎಂಬುದಕ್ಕೂ ಇದು ಒಂದು ನಿದರ್ಶನವಾಗಿದೆ. ವೈದ್ಯರಾದವರು ಉತ್ತಮ ಚಿಕಿತ್ಸೆಯನ್ನು ಯಾವುದೇ ಸ್ಥಳದಲ್ಲಿ ನೀಡಿದರೂ ಅದು ಇಡೀ ಜಗತ್ತಿನ ಗಮನ ಸೆಳೆಯುತ್ತದೆ ಎಂಬ ಸಂದೇಶವೂ ಇದರಲ್ಲಿ ಅಡಕವಾಗಿದೆ.

ಇಲ್ಲಿ ನಾನು ಮತ್ತೊಂದು ವಿಷಯ ಹೇಳಲೇಬೇಕು. ಯಾವುದೇ ಶಸ್ತ್ರಚಿಕಿತ್ಸೆಯು ಸಂಘಟಿತ ಕೆಲಸವಾಗಿರುತ್ತದೆ. ಈ ತಂಡಕ್ಕೆ ಸರ್ಜನ್ ಆದವರು ಮುಖ್ಯಸ್ಥರಿರಬಹುದು. ಆದರೆ, ಅದರ ಫಲಿತಾಂಶದ ಹಿಂದೆ ತಂಡದ ಪ್ರತಿಯೊಬ್ಬ ಸದಸ್ಯರ ಪರಿಶ್ರಮ ಇರುತ್ತದೆ. ಯಶಸ್ವಿ ಅಂತಿಮ ಫಲಿತಾಂಶ ಕಂಡುಬರುವುದರಲ್ಲಿ ಪ್ರತಿಯೊಬ್ಬರ ಪಾತ್ರವೂ ಮುಖ್ಯವಾಗಿರುತ್ತದೆ. ಹೀಗಾಗಿ, ನನಗೆ ಸಿಕ್ಕ ಈ ಗೌರವ ಹಾಗೂ ಮೆಚ್ಚುಗೆಯು ಇಡೀ ತಂಡಕ್ಕೆ, ಅಂದರೆ, ಸಹೋದ್ಯೋಗಿಗಳು, ವಿದ್ಯಾರ್ಥಿ ವೃಂದ, ಶಸ್ತ್ರಚಿಕಿತ್ಸಾ ಕೊಠಡಿಯ ದಾದಿಯರು, ಅರಿವಳಿಕೆ ತಜ್ಞರು, ಪ್ಯಾಥಾಲಜಿಸ್ಟರು, ಐಸಿಯು ಸಿಬ್ಬಂದಿ ಇತ್ಯಾದಿ ಇವರೆಲ್ಲರಿಗೂ ಸಲ್ಲುತ್ತದೆ. ಈ ಸಮಾವೇಶದಲ್ಲಿ ನಾನು ಮಾತ್ರವೇ ಭಾರತದಿಂದ ಪಾಲ್ಗೊಳ್ಳಲು ಆಯ್ಕೆಯಾಗಿದ್ದು, ಒಟ್ಟಾರೆ, ಜಾಗತಿಕ ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ್ದು ವಿಶೇಷ ಅನುಭವಕ್ಕೆ ಕಾರಣವಾಗಿದೆ.

**ಮೂಲ ಲೇಖನ: ಡಾ.ಎಂ.ಎಚ್.ಮನೋನ್ಮಣಿ,**
ಪ್ರಾಧ್ಯಾಪಕರು, ಗ್ಯಾಸ್ಟ್ರೋ ಎಂಟಾರಾಲಜಿ ಸರ್ಜನ್,
ಶ್ರೀದೇವಿ ವೈದ್ಯಕೀಯ ಕಾಲೇಜು

▪ ಕನ್ನಡಕ್ಕೆ: ವೆಂಕಟೇಶ್ ಪ್ರಸಾದ್

# ಶ್ರೀದೇವಿ ಆಸ್ಪತ್ರೆಯಲ್ಲಿ "ಕಾರ್ಡಿಯೋ ಥೋರಾಸಿಕ್ ವ್ಯಾಸ್ಕ್ಯುಲರ್ ಸರ್ಜರಿ ಆಪರೇಷನ್ ಥಿಯೇಟರ್" ಉದ್ಘಾಟನೆ

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯಲ್ಲಿ ವಿವಿಧ ವಿಭಾಗಗಳು ಕಳೆದ ಹತ್ತು ವರ್ಷಗಳಿಂದ ಅಭಿವೃದ್ಧಿಯಾಗುತ್ತಾ ಬರುತ್ತಿದೆ. ಇದರಲ್ಲಿ ಅತಿ ಮುಖ್ಯವಾಗಿರುವ ಹೃದಯ ರೋಗದ ಚಿಕಿತ್ಸೆಗೆ ಸಂಬಂಧಪಟ್ಟಂತೆ ಎರಡು ವರ್ಷಗಳ ಹಿಂದೆಯೇ 'ಅಡ್ವಾನ್ಸ್ಡ್ ಕ್ಯಾಥ್‌ಲ್ಯಾಬ್' (Advanced Cath Lab) ಸಿದ್ಧವಾಗಿ ರೋಗಿಗಳಿಗೆ ಅನುಕೂಲವಾಗಿತ್ತು. ಇದರ ಮುಂದುವರೆದ ಭಾಗವಾಗಿ ಹೃದಯ ರೋಗ ಶಸ್ತ್ರಚಿಕಿತ್ಸಾ ಘಟಕವನ್ನು ಇಂದು (ಜೂನ್ 22) ನೂತನವಾಗಿ ಉದ್ಘಾಟಿಸಲಾಯಿತು. ಹೃದಯ ರೋಗಕ್ಕೆ ಸಂಬಂಧಪಟ್ಟ ಸಂಕೀರ್ಣ ಶಸ್ತ್ರಚಿಕಿತ್ಸೆಗಳು ಅಂದರೆ ತೆರೆದ ಹೃದಯ ಶಸ್ತ್ರಚಿಕಿತ್ಸೆ, ಕವಾಟಗಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಗಳು, ರಕ್ತನಾಳಗಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಗಳನ್ನು ಇಲ್ಲಿ ಮಾಡಬಹುದು.

"ವೈದ್ಯಕೀಯ ಕ್ಷೇತ್ರ ದಿನದಿಂದ ದಿನಕ್ಕೆ ಬದಲಾವಣೆ ಹೊಂದುತ್ತಿದ್ದು, ಈ ಬದಲಾವಣೆಗೆ ಆಧುನಿಕ ಯಂತ್ರೋಪಕರಣಗಳು ಕಾರಣವಾಗಿವೆ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳನ್ನು ಗುರುತಿಸುವ ಹಾಗೂ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಅತ್ಯಾಧುನಿಕ ಉಪಕರಣಗಳಿಂದ ಕ್ರಾಂತಿಕಾರಕ ಬದಲಾವಣೆಯಾಗಿದೆ. ಶ್ರೀದೇವಿ ಆಸ್ಪತ್ರೆಯಲ್ಲಿ ಇಂದು ಪ್ರಾರಂಭಿಸಿರುವ ಹೃದ್ರೋಗಿಗಳ ಶಸ್ತ್ರಚಿಕಿತ್ಸಾ ಘಟಕದಲ್ಲಿ ಎಲ್ಲಾ ರೀತಿ ಸೌಲಭ್ಯ ದೊರೆಯುವ ವ್ಯವಸ್ಥೆ ಮಾಡಲಾಗಿದೆ. ಈ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯದಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಿದೆ" ಎಂದು ಶ್ರೀದೇವಿ ಶಿಕ್ಷಣ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಆವರಣದಲ್ಲಿ ಜೂನ್ 22 ರಂದು ನೂತನ ಅತ್ಯಾಧುನಿಕ, ಹೃದಯ ರೋಗಕ್ಕೆ ಸಂಬಂಧಿಸಿದ ಸುಸಜ್ಜಿತ Cardio Thoracic Vascular Surgery ಆಪರೇಷನ್ ಥಿಯೇಟರ್, (ಕಾರ್ಡಿಯೋ ಥೋರಾಸಿಕ್ ವ್ಯಾಸ್ಕ್ಯುಲರ್ ಸರ್ಜರಿ ಆಪರೇಷನ್ ಥಿಯೇಟರ್ ಘಟಕವನ್ನು) ಉದ್ಘಾಟಿಸಲಾಯಿತು.



**ಹೃದಯ ರೋಗಕ್ಕೆ ಸಂಬಂಧಿಸಿದ ಸುಸಜ್ಜಿತ Cardio Thoracic Vascular Surgery (ಕಾರ್ಡಿಯೋ ಥೋರಾಸಿಕ್ ವ್ಯಾಸ್ಕ್ಯುಲರ್ ಸರ್ಜರಿ ಆಪರೇಷನ್ ಥಿಯೇಟರ್ ಘಟಕವನ್ನು) ಉದ್ಘಾಟಿಸಲಾಗಿತ್ತು, ಚಿತ್ರದಲ್ಲಿ ಶ್ರೀದೇವಿ ಶಿಕ್ಷಣ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಹೃದಯ ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸುರೇಶ್, ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಡಾ.ಲಾವಣ್ಯ ರಮಣ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಉಪಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿ ಮುಂತಾದವರು ಉಪಸ್ಥಿತರಿದ್ದರು.**

ಇದೇ ಸಂದರ್ಭದಲ್ಲಿ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ನೂತನ ಶಸ್ತ್ರಚಿಕಿತ್ಸೆಯ ಘಟಕದಲ್ಲಿ ನುರಿತ ತಜ್ಞ ವೈದ್ಯರನ್ನು ನಿಯೋಜಿಸಲಾಗಿದೆ. ವಿಶೇಷ ಕಾಳಜಿ ವಹಿಸಿ ಹೃದಯ ರೋಗಕ್ಕೆ ಸಂಬಂಧಪಟ್ಟ ಅತ್ಯಾಧುನಿಕ ನೂತನ ಉಪಕರಣಗಳನ್ನು ಶಸ್ತ್ರಚಿಕಿತ್ಸಾ ಘಟಕಕ್ಕೆ ಒದಗಿಸಲಾಗಿದೆ" ಎಂದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆಯ ಹೃದಯ ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸುರೇಶ್‌ರವರು ಮಾತನಾಡುತ್ತಾ "ವೈದ್ಯಕೀಯ ಶಿಕ್ಷಣದ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯಕ್ಕಾಗಿ ಇದನ್ನು ಪ್ರಾರಂಭಿಸಿರುವುದರಿಂದ ಇಲ್ಲಿ ವಿಶೇಷ ತಜ್ಞತೆ ಹೊಂದಿರುವ ನೂತನ ವಿಭಾಗಗಳನ್ನು ಕಾಣಬಹುದಾಗಿದೆ. ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ವಿಶೇಷ ತರಬೇತಿ ಹೊಂದಿದ ನುರಿತ ತಜ್ಞ ವೈದ್ಯರನ್ನು ನಿಯೋಜಿಸಿಕೊಳ್ಳಲಾಗಿದೆ. ಪ್ರಯೋಗಾಲಯ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗೆ ಸಂಬಂಧಪಟ್ಟ ವಿಶೇಷ ಉಪಕರಣಗಳನ್ನು ಈ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಅಳವಡಿಸಲಾಗಿದೆ. ಹೃದಯ ರೋಗ ಚಿಕಿತ್ಸೆಗೆ ಅತ್ಯಾಧುನಿಕ ಕ್ಯಾಥ್‌ಲ್ಯಾಬ್ ಮತ್ತು ಸುಸಜ್ಜಿತ ಸಿ.ಸಿ. ಘಟಕವನ್ನು ಹೊಂದಲಾಗಿದೆ. ದಿನದ 24 ಗಂಟೆಯೂ ಇಲ್ಲಿ ಚಿಕಿತ್ಸೆಯ ಲಭ್ಯವಿದೆ" ಎಂದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್ ಅವರು ಮಾತನಾಡುತ್ತಾ "ಶ್ರೀದೇವಿ ಮೆಡಿಕಲ್ ಕಾಲೇಜ್‌ನಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗಾಗಿ ವ್ಯಾಸಂಗ ಮಾಡುತ್ತಿದ್ದಾರೆ. ವೈದ್ಯಕೀಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ವಿಭಾಗಗಳನ್ನು ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಲಾಗಿದೆ. ಇದರ ಅಂಗವಾಗಿ ಹೃದಯ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟಂತೆ ಅತ್ಯಾಧುನಿಕ ಉಪಕರಣಗಳನ್ನು ಒಳಗೊಂಡ ಕ್ಯಾಥ್‌ಲ್ಯಾಬ್, ಹೃದಯ ಶಸ್ತ್ರಚಿಕಿತ್ಸಾ ಆಪರೇಷನ್ ಥಿಯೇಟರ್ ಮತ್ತು ವಾರ್ಡ್‌ಗಳನ್ನು ಸಜ್ಜುಗೊಳಿಸಲಾಗಿದೆ. ಇದರ ಲಾಭ ವೈದ್ಯಕೀಯ ವಿದ್ಯಾರ್ಥಿ ಮತ್ತು ರೋಗಿಗಳಿಗೆ ದೊರೆಯುತ್ತದೆ. ಶಸ್ತ್ರಚಿಕಿತ್ಸಾ ಕೊಠಡಿಯಿಂದ ವೈದ್ಯಕೀಯ ಶಿಕ್ಷಣದ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಹೃದಯ ರೋಗಕ್ಕೆ ಸಂಬಂಧಪಟ್ಟ ವಿಷಯಗಳ ಅಧ್ಯಯನಕ್ಕೆ ಅನುಕೂಲವಾಗುತ್ತದೆ" ಎಂದರು.

> **"ಕಾರ್ಡಿಯೋ ಥೋರಾಸಿಕ್ ವ್ಯಾಸ್ಕ್ಯುಲರ್ ಸರ್ಜರಿ ಆಪರೇಷನ್ ಥಿಯೇಟರ್‌ನಲ್ಲಿ ಹೃದಯದ ಶಸ್ತ್ರಚಿಕಿತ್ಸೆಯನ್ನು ಮಾಡುವ ನುರಿತ ತಜ್ಞವೈದ್ಯರು, ಶಸ್ತ್ರಚಿಕಿತ್ಸೆಗೆ ಬೇಕಾದ ಅರಿವಳಿಕೆ ವೈದ್ಯರು, ನುರಿತ ತಾಂತ್ರಿಕ ಸಿಬ್ಬಂದಿಗಳನ್ನು ಒಳಗೊಂಡಂತೆ ತುರ್ತು ಹೃದಯ ಶಸ್ತ್ರಚಿಕಿತ್ಸೆಗೆ ಬೇಕಾಗುವ ಎಲ್ಲಾ ಅತ್ಯಾಧುನಿಕ ಉಪಕರಣ ಮತ್ತು ಮಾನವ ಸಂಪನ್ಮೂಲವನ್ನು ಒದಗಿಸಲಾಗಿದೆ. ಇನ್ನು ಮುಂದೆ ದಿನದ 24 ಗಂಟೆಯೂ ಶಸ್ತ್ರಚಿಕಿತ್ಸಾ ಕೊಠಡಿಯು ಕೆಲಸ ನಿರ್ವಹಿಸುತ್ತದೆ. ಇದಕ್ಕೆ ಪೂರಕವಾಗಿ ಪ್ರೀ ಆಪರೇಟಿವ್ ವಾರ್ಡ್, ಪೋಸ್ಟ್ ಆಪರೇಟಿವ್ ವಾರ್ಡ್ ಮತ್ತು ತೀವ್ರ ನಿಗಾ ಘಟಕಗಳನ್ನು ಇದರೊಡನೆ ಸೇರಿಸಲಾಗಿದೆ. ಹೃದಯ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟ ರೋಗಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.**
>
> **ಡಾ. ರಮಣ ಎಂ. ಹುಲಿನಾಯ್ಕರ್**
> ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

■ ವರದಿ: ಎನ್.ಆನಂದ

# ಉದ್ಯೋಗದ ಕಣಜವಾಗಿರುವ ಪ್ಯಾರಾಮೆಡಿಕಲ್ ಕೋರ್ಸ್‌ಗಳು



■ **ಡಾ.ಸಿ.ಪಿ.ಚಂದ್ರಪ್ಪ**
**ಉಪ ಪ್ರಾಂಶುಪಾಲರು**
**ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜು**

ವೈದ್ಯಕೀಯ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವ ಪ್ಯಾರಾಮೆಡಿಕಲ್ ಕೋರ್ಸ್‌ಗಳು ಇತ್ತೀಚೆಗೆ 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಅತ್ಯುತ್ತಮ ಆಯ್ಕೆಯಾಗಿದೆ. ಅದಕ್ಕಾಗಿಯೇ ಈ ಲೇಖನದಲ್ಲಿ ಅರೆವೈದ್ಯಕೀಯ ಕೋರ್ಸ್‌ಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

**ಪ್ಯಾರಾಮೆಡಿಕಲ್ (ಅರೆವೈದ್ಯರು) ಎಂದರೇನು?**

ಪ್ಯಾರಾಮೆಡಿಕಲ್ (ಅರೆವೈದ್ಯರು) ವಿವಿಧ ವಿಶೇಷತೆಗಳನ್ನು ಒಳಗೊಂಡಿರುವ ವೈದ್ಯಕೀಯ ಸಂಬಂಧಿತ ಕೋರ್ಸ್ ಆಗಿದ್ದು, ವಿದ್ಯಾರ್ಥಿಯು ಮೂಲಭೂತ ವೈದ್ಯಕೀಯ ತಂತ್ರಗಳ ಜ್ಞಾನವನ್ನು ಪಡೆಯಬಹುದು.

**ಪ್ಯಾರಾಮೆಡಿಕಲ್ ಕೋರ್ಸ್ ಏಕೆ ಆರಿಸಬೇಕು?**

ಪ್ಯಾರಾಮೆಡಿಕಲ್ ಕೋರ್ಸ್ ಆರೋಗ್ಯ ಕ್ಷೇತ್ರದ ಅವಿಭಾಜ್ಯ ಮತ್ತು ನಿರ್ಣಾಯಕ ಭಾಗವಾಗಿ ವಿಕಸನಗೊಂಡಿದೆ. ಆರೋಗ್ಯ ಇಲಾಖೆ, ಆಸ್ಪತ್ರೆಗಳು ಮತ್ತು ಖಾಸಗಿ ಆರೋಗ್ಯವಲಯದ ಪ್ರತಿ ಹಂತದಲ್ಲೂ ಅರೆವೈದ್ಯಕೀಯ ಸಿಬ್ಬಂದಿಗಳ ಅಗತ್ಯವಿದೆ. ಇದು ಉದ್ಯೋಗ-ಆಧಾರಿತ ವೈದ್ಯಕೀಯ ವೃತ್ತಿಯಾಗಿದ್ದು, ಜನರಿಗೆ ಸೇವೆ ಸಲ್ಲಿಸಲು ಮತ್ತು ಸಹಾಯ ಮಾಡಲು ಯಥೇಚ್ಛವಾದ ಅವಕಾಶವಿರುತ್ತದೆ. ಈ ನಿಸ್ವಾರ್ಥ ಸೇವೆಯ ಜೊತೆಗೆ, ಪ್ಯಾರಾಮೆಡಿಕಲ್ ಕೋರ್ಸ್ ವಿದ್ಯಾರ್ಥಿಗಳಿಗೆ ಉತ್ತಮ ವೃತ್ತಿಜೀವನವನ್ನು ಕಟ್ಟಿಕೊಡುತ್ತದೆ. ಈ ಕೋರ್ಸ್ ಕುರಿತು ಕೆಳಗಿನ ಅಂಕಿಅಂಶಗಳಿಂದ ಅದು ಸಾಬೀತಾಗುತ್ತದೆ.

- ಭಾರತದಲ್ಲಿನ ಆರೋಗ್ಯ ಕ್ಷೇತ್ರವು ಸರ್ಕಾರ ಮತ್ತು ಖಾಸಗಿ ವಲಯಗಳ ನಿರಂತರ ಕೊಡುಗೆಯೊಂದಿಗೆ ವೇಗದಿಂದ ಬೆಳೆಯುತ್ತಿದೆ.
- ಆಸ್ಪತ್ರೆಯ ಉದ್ಯಮವು ಒಟ್ಟು ಆರೋಗ್ಯ ಮಾರುಕಟ್ಟೆಯ ಸುಮಾರು ಶೇಕಡ 80ರಷ್ಟು ಕೊಡುಗೆ ನೀಡುತ್ತದೆ. ಆಸ್ಪತ್ರೆಯ ಉದ್ಯಮವು 2023ರ ವೇಳೆಗೆ $132 ಶತಕೋಟಿಯನ್ನು ತಲುಪುತ್ತದೆ ಎಂದು ಅಂದಾಜಿಸಲಾಗಿದೆ.
- 2021ರ ಹೊತ್ತಿಗೆ, ಭಾರತೀಯ ಆರೋಗ್ಯ ಕ್ಷೇತ್ರವು ಅತ್ಯಧಿಕ ಉದ್ಯೋಗ ಸೃಷ್ಟಿಯ ಕ್ಷೇತ್ರಗಳಲ್ಲಿ ಒಂದಾಗಿತ್ತು. ಇದು ಒಟ್ಟು 4.7ಮಿಲಿಯನ್ ಜನರಿಗೆ ಉದ್ಯೋಗ ನೀಡಿದೆ.
- ದೇಶದ ಆರೋಗ್ಯ ರಕ್ಷಣೆಯ ವ್ಯಾಪ್ತಿಯನ್ನು ಹೆಚ್ಚಿಸಲು ಸರ್ಕಾರವು INR 500 ಶತಕೋಟಿಯ ಕ್ರೆಡಿಟ್ ಪ್ರೋತ್ಸಾಹವನ್ನು ನೀಡಲು ಯೋಜಿಸುತ್ತಿದೆ.
- ಆದಾಯ ಮತ್ತು ಉದ್ಯೋಗದ ವಿಷಯದಲ್ಲಿ ಹೆಲ್ತ್‌ಕೇರ್ ಭಾರತದ ಅತಿದೊಡ್ಡ ಕ್ಷೇತ್ರಗಳಲ್ಲಿ ಒಂದಾಗಿದೆ. ಹೀಗಾಗಿ, ಉದ್ಯೋಗಾವಕಾಶಗಳು ಮತ್ತು ವೃತ್ತಿ ಅಭಿವೃದ್ಧಿಯ ವಿಷಯದಲ್ಲಿ ಇದು ಅತ್ಯಂತ ಪ್ರಭಾವಶಾಲಿ ವಲಯವಾಗಿದೆ.



**ಪ್ಯಾರಾಮೆಡಿಕಲ್‌ನಲ್ಲಿ ಎಷ್ಟು ಕೋರ್ಸ್‌ಗಳಿವೆ?**

ಈ ಕೆಳಕಂಡ ಕೋರ್ಸ್‌ಗಳನ್ನು ನೋಡಬಹುದು. ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನ, ಎಕ್ಸ್-ರೇ ತಂತ್ರಜ್ಞಾನ, ನೇತ್ರತಂತ್ರಜ್ಞಾನ, ಆಪರೇಷನ್ ಥಿಯೇಟರ್ ಮತ್ತು ಅರಿವಳಿಕೆ ತಂತ್ರಜ್ಞಾನ, ಡಯಾಲಿಸಿಸ್ ತಂತ್ರಜ್ಞಾನ, ವೈದ್ಯಕೀಯ ದಾಖಲೆ ತಂತ್ರಜ್ಞಾನ, ಆರೋಗ್ಯ ನಿರೀಕ್ಷಕ, ದಂತ ಮೆಕ್ಯಾನಿಕ್, ಹಲ್ಲಿನ ನೈರ್ಮಲ್ಯ, ಉಸಿರಾಟದ ಆರೈಕೆ ತಂತ್ರಜ್ಞಾನ, ನರವಿಜ್ಞಾನ, ಹೃದಯದ ಆರೈಕೆ ತಂತ್ರಜ್ಞಾನ, ಪರ್ಫ್ಯೂಷನ್ ತಂತ್ರಜ್ಞಾನ, ತುರ್ತು ಔಷಧ ಮತ್ತು ಆಘಾತ ಆರೈಕೆ ತಂತ್ರಜ್ಞಾನ.

**ಎಷ್ಟು ವಿಧಗಳ ಕೋರ್ಸ್‌ಗಳು?**

ಮೇಲೆ ಉಲ್ಲೇಖಿಸಿದ ಕೋರ್ಸ್‌ಗಳಲ್ಲಿ ಡಿಪ್ಲೊಮಾ ಮತ್ತು ಪದವಿ ಕೋರ್ಸ್‌ಗಳು ಲಭ್ಯವಿವೆ.

**ಶೈಕ್ಷಣಿಕ ಅರ್ಹತೆ ಏನು?**

ಡಿಪ್ಲೊಮಾಗೆ 10ನೇ ತರಗತಿ/SSLC/SSC ಪಾಸ್ ಮತ್ತು ಪದವಿಗಾಗಿ ಪಿಯುಸಿ ವಿಜ್ಞಾನದಲ್ಲಿ ತೇರ್ಗಡೆ/ ಸಂಬಂಧಿಸಿದ ಡಿಪ್ಲೊಮಾ ಪಾಸ್.

**ಕೋರ್ಸ್ ಅವಧಿ ಎಷ್ಟು?**

ಡಿಪ್ಲೊಮಾ 3 ವರ್ಷ ಮತ್ತು ಪದವಿ 4 ವರ್ಷ.

**ಎಲ್ಲೆಲ್ಲಿ ಉದ್ಯೋಗಾವಕಾಶಗಳು ಇವೆ?**

ಆಕರ್ಷಕ ಮತ್ತು ಆರೋಗ್ಯಕರ ಪ್ಯಾಕೇಜ್‌ಗಳೊಂದಿಗೆ ಪ್ಯಾರಾಮೆಡಿಕಲ್‌ನಲ್ಲಿ ಡಿಪ್ಲೊಮಾ ಮತ್ತು ಪದವೀಧರರನ್ನು ನೇಮಿಸಿಕೊಳ್ಳುತ್ತಿರುವ ಬಹಳಷ್ಟು ಕಂಪನಿಗಳಿವೆ. ವಿವಿಧ ಸಾರ್ವಜನಿಕ ಮತ್ತು ಖಾಸಗಿ ಕಂಪನಿಗಳು ಈ ಕ್ಷೇತ್ರದಲ್ಲಿ ಅಭ್ಯರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸಿವೆ. ಆದ್ದರಿಂದ, ಪ್ಯಾರಾಮೆಡಿಕ್ಸ್‌ನಲ್ಲಿ ಉನ್ನತ ನೇಮಕಾತಿದಾರರು ಈ ಕೆಳಗಿನಂತಿದ್ದಾರೆ.

**ನಾನಾವತಿ ಆಸ್ಪತ್ರೆ, ಫೋರ್ಟಿಸ್ ಆಸ್ಪತ್ರೆ, ಮಣಿಪಾಲ್ ಆಸ್ಪತ್ರೆ,ಅಪೋಲೋ ಆಸ್ಪತ್ರೆ,ವ್ಯಾಕ್ಹಾರ್ಟ್ ಆಸ್ಪತ್ರೆ, ಬಿಲ್ರೋತ್ ಆಸ್ಪತ್ರೆ, ಪುದುಚೇರಿ,ಆರ್ಟೆಮಿಸ್ ಆಸ್ಪತ್ರೆ,ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕೊಲಂಬಿಯಾ ಏಷ್ಯಾ ರೆಫರಲ್ ಆಸ್ಪತ್ರೆ.**

**ಸಂಬಳ ಮತ್ತು ಸವಲತ್ತುಗಳು:**

ಸರಾಸರಿ ವಾರ್ಷಿಕ ವೇತನ ಅಂದಾಜು INR 5,00,000-6,00,000.

## ಶಸ್ತ್ರಚಿಕಿತ್ಸಕರ ದಿನಾಚರಣೆ
## ಡಾ.ಹುಲಿನಾಯ್ಕರ್‌ಗೆ ಸನ್ಮಾನ

ಕರ್ನಾಟಕ ರಾಜ್ಯ, ಶಸ್ತ್ರಚಿಕಿತ್ಸಕರ ದಿನಾಚರಣೆ ಅಂಗವಾಗಿ ಹಿರಿಯ ಶಸ್ತ್ರಚಿಕಿತ್ಸಕರಾದ ಡಾ. ಎಂ.ಆರ್.ಹುಲಿನಾಯ್ಕರ್ ಡಾ.ಈ.ಎಂ.ಶಿವಕುಮಾರ್, ಅವರುಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ತಜ್ಞ ವೈದ್ಯರಾದ ಡಾ. ಜಗನ್ನಾಥ್ ದೀಕ್ಷಿತ್ ಅವರು 'ಸಿ.ಎಮ್.ಇ.ಆನ್ ರೋಬೋಟಿಕ್' ಕುರಿತು ವಿಶೇಷ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾದ ಕೆ.ಎ.ಎಸ್.ಐ ಕಾರ್ಯದರ್ಶಿ ಡಾ. ಚಂದ್ರಶೇಖರ್ ಅವರು ಕೆಎಎಸ್ಐ ಚಟುವಟಿಕೆಗಳ ಕುರಿತು ಮಾತನಾಡಿದರು. ಅತಿಥಿಗಳು ಮತ್ತು ಪ್ರಶಸ್ತಿ ಪುರಸ್ಕೃತರು ಡಾ. ಪ್ರಶಾಂತ್ ಬಿ ನಿರ್ವಾಣಿ ರಾವ್ ಮತ್ತು ತಂಡದ ಕಾರ್ಯ ಹಾಗೂ ಚಟುವಟಿಕೆಗಳನ್ನು ಶ್ಲಾಘಿಸಿದರು. ಭಾರತೀಯ ವೈದ್ಯಕೀಯ ಸಂಘದ ಹಿರಿಯ ಮುಖಂಡ ಡಾ. ಪ್ರಭಾಕರ ಜಿ.ಎನ್.ಮಾತನಾಡಿದರು. ಈ ಸಂದರ್ಭದಲ್ಲಿ ತುಮಕೂರು ನಗರ ಶಾಖೆಯ ಅಧ್ಯಕ್ಷರಾದ ಡಾ. ಪ್ರಶಾಂತ್ ಬಿ ನಿರ್ವಾಣಿ ರಾವ್, ಕಾರ್ಯದರ್ಶಿ ಡಾ. ಎಲ್ ಚೇತನ್ ಮತ್ತು ಖಜಾಂಚಿ ಡಾ. ಪಿ ಒ ವಿವೇಕ್ ಹಾಗೂ ಇತರ ವೈದ್ಯರು ಉಪಸ್ಥಿತರಿದ್ದರು.



# ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದೀಕ್ಷಾಂತ್ ಪದವಿ ಪ್ರದಾನ ಸಮಾರಂಭ–2023




ಚಿತ್ರದಲ್ಲಿ ಟಾಟಾ ಕನ್ಸಲ್ಟೆನ್ಸಿ ಸೇವೆಯ ಮ್ಯಾನೇಜರ್ ಕೆ.ಶ್ರೀನಿವಾಸ ರಾಮಾನುಜಂ, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್.ಹುಲಿನಾಯ್ಕರ್, ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್, ಕಾರ್ಯಕ್ರಮ ಸಂಯೋಜಕರಾದ ಪ್ರೊ.ಕೆ.ಪಿ.ಚಂದ್ರಯ್ಯ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

"ವಿದ್ಯಾರ್ಥಿಗಳೇ, ಯಶಸ್ಸು ಎಂಬುದು ನಿರಂತರ ಕಲಿಕೆ, ಸತತ ಪರಿಶ್ರಮ ಮತ್ತು ಸೇವೆಯಿಂದ ಮಾತ್ರ ದೊರೆಯುತ್ತದೆ. ಕಲಿಕೆ ಎನ್ನುವುದು ನಿರಂತರ ಪ್ರಕ್ರಿಯೆ. ಹೊಸ ಹೊಸ ತಂತ್ರಜ್ಞಾನವನ್ನು ನೀವು ಸದಾ ಕಲಿಯುತ್ತಾ ಹೋಗಬೇಕು. ಆ ಮೂಲಕ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಶಿಸ್ತು, ತಾಳ್ಮೆ ಮತ್ತು ಏಕಾಗ್ರತೆಯ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತುಬದ್ಧವಾಗಿ ಕೆಲಸ ಮಾಡುವುದರ ಮೂಲಕ ಸಮಾಜಕ್ಕೆ ಬಹುದೊಡ್ಡ ಕೊಡುಗೆ ಕೊಡಬಹುದು" ಎಂದು ಬೆಂಗಳೂರಿನ ಎಡ್ಲ್ಯೂಎಸ್ ಬಿಸಿನೆಸ್ ಲಿಮಿಟೆಟ್ ಹಾಗೂ ಟಾಟಾ ಕನ್ಸಲ್ಟೆನ್ಸಿ ಸೇವೆಯ ಮ್ಯಾನೇಜರ್‌ರಾದ ಕೆ.ಶ್ರೀನಿವಾಸ ರಾಮಾನುಜಂ ಅವರು ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ವತಿಯಿಂದ ಜೂನ್ 17ರಂದು ನಡೆದ 'ದೀಕ್ಷಾಂತ್ ಪದವಿ ಪ್ರದಾನ ಸಮಾರಂಭವನ್ನು 2023' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹೇಳಿದ ಮಾತುಗಳಿವು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ. ಆರ್.ಹುಲಿನಾಯ್ಕರ್ ಅವರು "ಭಾರತದ ವಿವಿಧ ಕ್ಷೇತ್ರಗಳಲ್ಲಿ ಟಾಟಾ ಸಂಸ್ಥೆ ಅತ್ಯುನ್ನತ ಮಟ್ಟದಲ್ಲಿ ಸೇವೆ ಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಟಾಟಾ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಅವಕಾಶವಿದೆ. ಇಂದಿನ ಕಾಲದಲ್ಲಿ ವ್ಯಾಸಂಗ ಮುಗಿಸಿ ಕಾಲೇಜುಗಳಿಂದ ಹೊರಬರುತ್ತಿರುವ ಪದವೀಧರರಿಗೆ ಅವಕಾಶಗಳ ಸಾಗರವೇ ಲಭ್ಯವಿದ್ದು, ಸರಿಯಾದ ಮಾರ್ಗದರ್ಶನದಲ್ಲಿ ಸಾಗಿದರೆ ಅವರ ಸಾಧನೆಗಳಿಗೆ ಮಿತಿಯೆಂಬುದೇ ಇರುವುದಿಲ್ಲ. ಶಿಕ್ಷಕರ ಮತ್ತು ಪೋಷಕರ ಸಹಕಾರದೊಂದಿಗೆ ತಾವೆಲ್ಲರೂ ಇಂದು ಇಂಜಿನಿಯರಿಂಗ್ ಪದವಿ ಗಳಿಸಿದ್ದೀರ, ಎಲ್ಲಾ ಪದವಿ ಪಡೆದ ಎಲ್ಲಾ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಭಹಾರೈಕೆಗಳು. ನೀವು ಯಾವುದೇ ಕ್ಷೇತ್ರದಲ್ಲಿದ್ದರೂ ತಂದೆ, ತಾಯಿ ಮತ್ತು ಶಿಕ್ಷಣ ನೀಡಿದ ಸಂಸ್ಥೆಗಳನ್ನು ಕೃತಜ್ಞತೆಯಿಂದ ನೆನೆಯಬೇಕು" ಎಂದರು.

ಸಮಾರಂಭದಲ್ಲಿ ಗೌರವಾನ್ವಿತ ಅತಿಥಿಗಳಾಗಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಮಾತನಾಡುತ್ತಾ "ಪದವೀಧರರು ಸ್ಮಾರ್ಟ್‌ವರ್ಕ್ ಪ್ರವೃತ್ತಿಯನ್ನು ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಂಡರೆ ಯಶಸ್ಸು ಖಂಡಿತ ದೊರಕುತ್ತದೆ. ಹೊಸ ಹೊಸ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುವಾಗ ನಿರಂತರವಾಗಿ ಕಲಿಕೆಯನ್ನು ಮುಂದುವರೆಸುತ್ತಾ ಹೋಗಬೇಕು. ಹೊಸ ಬಗೆಯ ತಂತ್ರಜ್ಞಾನವನ್ನು ಬೆಳೆಸಿಕೊಂಡರೆ ಮಾತ್ರ ತಾವು ತಮ್ಮ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ಸಮಾರಂಭದಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್ ಅವರು "ಗುಣಾತ್ಮಕ ಶಿಕ್ಷಣ ನೀಡುವುದರಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಯು ಬಹುಮುಖ್ಯ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು. ಡೀನ್ ಡಾ.ಚಂದ್ರಶೇಖರ್‌ರವರು ಪದವೀಧರರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

# ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ವೈದ್ಯಕೀಯ ದಿನಾಚರಣೆ

"ಪಶ್ಚಿಮ ಬಂಗಾಳದ ಎರಡನೆಯ ಮುಖ್ಯಮಂತ್ರಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ದೇಶದಲ್ಲಿ ಆಧುನಿಕ ವೈದ್ಯಕೀಯ ಪದ್ಧತಿ ಭದ್ರವಾಗಿ ತಳವೂರಲು ಶ್ರಮಿಸಿರುವ, ನಮ್ಮ–ನಿಮ್ಮೆಲ್ಲರ ಆರಾಧ್ಯದೈವವಾಗಿರುವ 'ಭಾರತರತ್ನ' ಪ್ರಶಸ್ತಿ ಪುರಸ್ಕೃತರಾಗಿರುವ ಡಾ.ಬಿದಾನ್ ಚಂದ್ರರಾಯ್ (ಜನನ ಜುಲೈ 1 1882 ಮರಣ. ಜುಲೈ 1 1962) ಅವರನ್ನು ಸ್ಮರಿಸಿಕೊಳ್ಳುವುದೆಂದರೆ ನಾವು ವೈದ್ಯಕೀಯ ವೃತ್ತಿಗೆ ಅರ್ಪಿಸಿಕೊಳ್ಳುತ್ತಿದ್ದೇವೆ, ಅವರ ಮಾರ್ಗದಲ್ಲಿ ಹೆಜ್ಜೆ ಇಡಲು ಸಂಕಲ್ಪ ಮಾಡಿದ್ದೇವೆ ಎಂದರ್ಥ.

ಡಾ.ಬಿ.ಸಿ.ರಾಯ್ ನಮಗೆಲ್ಲಾ ತಮ್ಮ ಬದುಕಿನ ಮೂಲಕವೇ ಸಂದೇಶ ಕೊಟ್ಟಿದ್ದಾರೆ. ವೈದ್ಯರಾದ ನಾವು ರೋಗಿಯ ಸೇವೆಗೆ ಮೊದಲ ಪ್ರಾಶಸ್ತ್ಯ ಕೊಡಬೇಕು. ವೈದ್ಯವೃತ್ತಿಯನ್ನು ನಾವು– ನೀವು ತುಂಬಾ ಇಷ್ಟಪಟ್ಟು ಆಯ್ಕೆ ಮಾಡಿಕೊಂಡಿದ್ದೇವೆ. ಈ ಕಾಲದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಬರುವುದು ಅಷ್ಟು ಸುಲಭವಲ್ಲ. ಹೇಗೋ ಅಧ್ಯಯನಕ್ಕೆ ಬಂದಿದ್ದೇವೆ. ಇದನ್ನು ಯಶಸ್ವಿಯಾಗಿ ಮುಗಿಸಿ ಪದವಿಯನ್ನು ಪಡೆಯುತ್ತೇವೆ. ಆಗ ನಾವು 'ವೈದ್ಯರ ಕುಟುಂಬ'ಕ್ಕೆ ಸೇರ್ಪಡೆಯಾಗುತ್ತೇವೆ. ಆಮೇಲೆ ನಮ್ಮಲ್ಲಿ ಮೂಲತಃ ನಾವ ವೈದ್ಯರು ಎಂಬ ಪ್ರಜ್ಞೆ ಜೀವನದ ಉದ್ದಕ್ಕೂ ಇರಬೇಕು. ನಾವು ಯಾವುದೇ ವೃತ್ತಿ ಮಾಡಲಿ ನಾವು ವೈದ್ಯರು ಎಂಬುದೇ ನಮ್ಮ ವ್ಯಕ್ತಿತ್ವದ ಮೂಲ ಗುಣವಾಗಬೇಕು. ಈ ವಿಚಾರ ನಮ್ಮ ಸುಪ್ತಪ್ರಜ್ಞೆಯಲ್ಲಿ ಸೇರಿಹೋಗಬೇಕು. ವೈದ್ಯನಾಗಿ




ನಾನು ಕರ್ತವ್ಯ ನಿರ್ವಹಿಸಬೇಕು ಎನ್ನುವ ಪ್ರಜ್ಞೆ ನಿಮ್ಮಲ್ಲಿ ಸದಾ ಜಾಗೃತವಾಗಿದ್ದರೆ, ಅದು ನಿಮ್ಮನ್ನು ನಿದ್ದೆ ಮಾಡಲು ಬಿಡುವುದಿಲ್ಲ. ಇಂತಹ ತುಡಿತವಿದ್ದರೆ ನೀವು ಯಶಸ್ವಿ ವೈದ್ಯರಾಗುತ್ತೀರ.

ವೈದ್ಯಕೀಯ ವೃತ್ತಿಯಷ್ಟು ಬೇರ್‍ಯಾವ ವೃತ್ತಿಯೂ ನಿಮಗೆ ಆತ್ಮತೃಪ್ತಿ ತಂದುಕೊಡುವುದಿಲ್ಲ. ಇಂತಹ ತೃಪ್ತಿಯನ್ನು ನಾನು ಅನುಭವಿಸಿರುವ ಕಾರಣ ಅದನ್ನು ನಿಮಗೆ ಹೇಳುತ್ತಿದ್ದೇನೆ. ಇಂದು ಎಂ.ಬಿ.ಬಿ.ಎಸ್. ಮೊದಲಾದ ವೈದ್ಯಕೀಯ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವವರು ತುಂಬಾ ಅದೃಷ್ಟವಂತರು. ಡಾ.ಬಿ.ಸಿ.ರಾಯ್‌ರಂತಹ ಮಹನೀಯರು ಈ ಕ್ಷೇತ್ರದಲ್ಲಿ 'ರಾಜಮಾರ್ಗ' ನಿರ್ಮಿಸಿಕೊಟ್ಟಿದ್ದಾರೆ. ನೀವು ಧೈರ್ಯವಾಗಿ ಅದರಲ್ಲಿ ಮುನ್ನಡೆಯಬಹುದು. ಉತ್ತಮ ಸಾಧನೆ ಮಾಡಿ ಕೀರ್ತಿಶಾಲಿಗಳಾಗಬಹುದು" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಏರ್ಪಡಿಸಿದ್ದ, ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಪ್ರತಿಭೆ ಮತ್ತು ಸೇವಾ ನಿರ್ವಹಣೆಗೆ ಸಂಸ್ಥೆಯ ಇಬ್ಬರು ವೈದ್ಯರನ್ನು ಸನ್ಮಾನಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಸಂಸ್ಥೆಯ ಅಧ್ಯಕ್ಷರೂ, ಖ್ಯಾತ ಸರ್ಜನ್ ಮತ್ತು 'ಶ್ರೀದೇವಿ ಅಂತರಂಗ' ಮಾಸಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ.ಎಂ.ಆರ್, ಹುಲಿನಾಯ್ಕರ್ ಅಭಿಪ್ರಾಯಪಟ್ಟರು. ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಮೋಹನ ಕುಮಾರ್ ಅವರು ಸ್ವಾಗತಿಸಿದರು. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಹರೇಂದ್ರಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಬೋಧನೆ ಮತ್ತು ಕ್ಲಿನಿಕಲ್ ವಿಭಾಗಗಳಲ್ಲಿ ಅನುಪಮ ಸೇವೆ ಸಲ್ಲಿಸಿರುವ ಶ್ರೀದೇವಿ ವೈದ್ಯಕೀಯ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ರೇಖಾ ಗುರುಮೂರ್ತಿ, ಸ್ತ್ರೀರೋಗ ಮತ್ತು ಪ್ರಸೂತಿ ಮತ್ತು ಡಾ.ದೀಪಕ್ ಟಿ.ಜಿ. ಎಮರ್ಜೆನ್ಸಿ ಮೆಡಿಸನ್ ವಿಭಾಗದಲ್ಲಿನ ಮುಖ್ಯಸ್ಥರಿಗೆ ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ನೀಡುವ '2023ರ ಪ್ರತಿಭಾ ಮತ್ತು ಸೇವಾ ಪುರಸ್ಕಾರ'ವನ್ನು ನೀಡಲಾಯಿತು. ಪ್ರಶಸ್ತಿ ಪುರಸ್ಕೃತರಾದ ಇಬ್ಬರು ತಮಗೆ ಇಂತಹ ಸಾಧನೆ ಮಾಡಲು ಶ್ರೀದೇವಿ ಸಂಸ್ಥೆ ಮತ್ತು ಅದರ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ನೀಡಿದ ಸಹಕಾರವನ್ನು ನೆನೆದು ಕೃತಜ್ಞತೆಗಳನ್ನು ಅರ್ಪಿಸಿದರು.

ಪ್ರಾರಂಭದಲ್ಲಿ, ಎರಡನೆಯ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿಯರಾದ ಕು.ಗಾಯಿತ್ರಿ ಮತ್ತು ಕೃತಿಕಾ ಅವರು ಪ್ರಾರ್ಥನೆ ಮಾಡಿದರು. ಪೆಥಾಲಜಿ ವಿಭಾಗದ ಡಾ.ಅಕ್ಷತಾ ಅವರು ಕಾರ್ಯಕ್ರಮ ನಿರೂಪಿಸಿದರು. ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಮೆಡಿಕಲ್ ಕಾಲೇಜಿನ ನೇತ್ರಶಾಸ್ತ್ರ ವಿಭಾಗದ ಡಾ.ಲಾವಣ್ಯ ರಮಣ ಮತ್ತು ಉಪ ಪ್ರಾಂಶುಪಾಲರಾದ ಡಾ.ಹೇಮಂತ ಕುಮಾರ್ ಅವರುಗಳು ವೇದಿಕೆಯಲ್ಲಿದ್ದರು.

# ಶ್ರೀಮಾತೆಯರ ಬದುಕಿನ ಸಂಕೀರ್ಣ ಕ್ಷಣಗಳು ಭಗವಂತನು ಸ್ತ್ರೀಯಾಗಿ ಅವತರಿಸುವ ಸಡಗರ

ಅರ್ಚನೆ



ಡಾ. ಕೆ. ಅನಂತರಾಮು
ನಿವೃತ್ತ ಪ್ರಾಧ್ಯಾಪಕರು, ಮೈಸೂರು

**ಕಳೆದ ಸಂಚಿಕೆಯಲ್ಲಿ:** ಪ್ರಾಪ್ತ ವಯಸ್ಸಿಗೆ ಶ್ರೀಮಾತೆ ಬಂದಾಗ ಅವರನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬರಲಾಗುತ್ತದೆ. ಅಲ್ಲಿನ ಅತಿ ಸಣ್ಣ ಕೊಠಡಿಯಲ್ಲಿ ವಾಸ ಮಾಡುವ ಶ್ರೀಮಾತೆ ಶ್ರೀರಾಮಕೃಷ್ಣ ಪರಮಹಂಸರಿಗೂ ಬಂದ ಅತಿಥಿಗಳಿಗೂ ಅಡುಗೆ ಮಾಡಿ ಊಟ ಬಡಿಸುತ್ತಾರೆ. ಜೊತೆಗೆ ಅಧ್ಯಾತ್ಮದಲ್ಲಿ ಶ್ರೀ ರಾಮಕೃಷ್ಣಪರಮಹಂಸರ ಮಾರ್ಗದರ್ಶನದಲ್ಲಿ ಕಠಿಣ ಸಾಧನೆ ಮಾಡುತ್ತಾರೆ. ಪರಮಹಂಸ ದಂಪತಿ ಬದುಕಿನುದ್ದಕ್ಕೂ ತೀವ್ರವಾದ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾರೆ. ಶ್ರೀಮಾತೆ ಅಧ್ಯಾತ್ಮ ಸಾಧನೆಯನ್ನು ಕಂಡು ಬೆರಗಾಗಿ ಶ್ರೀ ರಾಮಕೃಷ್ಣ ಪರಮಹಂಸರೇ ಅವರಲ್ಲಿ ಶ್ರೀ ಕಾಳಿದೇವಿಯನ್ನು ಕಂಡು ಸ್ವತಃ ತಾವೇ ಶ್ರೀಮಾತೆಗೆ ಪೂಜೆ ಮಾಡುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಗಂಟಲು ಕ್ಯಾನ್ಸರ್‌ನಿಂದ ನಿಧನರಾದ ಬಳಿಕ ಶ್ರೀಮಾತೆ ಅವರು ಕಠೋರ ಸಾಧನೆಯ ಮೂಲಕ ಕರ್ಮಯೋಗ ಜೀವನ ನಡೆಸುತ್ತಾರೆ. ಅವರ ಆದರ್ಶ ಬದುಕನ್ನು ಓದಿ...

**ಲೇಖಕರು**

ಡಾ. ಕೆ.ಅನಂತರಾಮು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಅಧ್ಯಾಪಕವೃತ್ತಿಗೆಂದೇ ಜನಿಸಿದ ಶ್ರೇಷ್ಠ ಪ್ರಾಧ್ಯಾಪಕರು ಅವರು. ಅವರ ಪಾಠ, ಪ್ರವಚನಗಳೆಂದರೆ ವಿದ್ಯಾರ್ಥಿಗಳಿಗೆ ಸಂತೋಷವೋ ಸಂತೋಷ. ಡಾ. ಅನಂತರಾಮು ಕನ್ನಡದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರು. ಅವರ ಮೂರು ಪ್ರವಾಸ ಕಥನಗಳಿಗೂ 'ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ಬಂದಿದೆ. 'ಕವಿ ಬ್ರಹ್ಮಶಿವ– ಒಂದು ಅಧ್ಯಯನ' ಅವರ ಪಿಹೆಚ್.ಡಿ. ಪ್ರಬಂಧದ ವಸ್ತು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

## ಕರುಣರಸಕ್ಕೆ ಕರಗಿದ ಪ್ರಸಂಗ

ಒಮ್ಮೆ ಶ್ರೀಮಾತೆಯವರು 'ಧ್ರುವಚರಿತ್ರೆ'ಯನ್ನು ಓದಿಸಿ ಕೇಳಲೆಂದು ರಾತ್ರಿಯ ಕಾಲದಲ್ಲಿ ಕೆಲವು ಭಕ್ತೆಯರೊಡನೆ ಕುಳಿತುಕೊಂಡರು. ಕಥೆಯ ಅಂತ್ಯವು ಸುಖಾಂತವಾಗಿದೆಯೇ ಹೊರತು, ಉದ್ದಕ್ಕೂ ಅದರಲ್ಲಿ ಕರುಣರಸದ ಕೋಡಿಯೇ ಹರಿಯುತ್ತದೆ. ಭಕ್ತನಾದ ವಾಚಕನೊಬ್ಬನು ಶ್ರದ್ಧೆಯಿಂದ ಓದುತ್ತಿರುವಾಗ ಎಲ್ಲರೂ ಏಕಾಗ್ರತೆಯಿಂದ ಆಲಿಸುತ್ತಾ ಕುಳಿತರು. ಉತ್ತಾನಪಾದನೆಂಬ ರಾಜನಿಗೆ ಸುರುಚಿ ಮತ್ತು ಸುನೀತಿ ಎಂಬಿಬ್ಬರು ರಾಣಿಯರಿದ್ದರು. ಪಟ್ಟದರಾಣಿ ಸುನೀತಿಗೆ ಧ್ರುವನೆಂಬ ಮಗನೂ ಕಿರಿಯ ರಾಣಿಗೆ ಉತ್ತಮನೆಂಬ ಮಗನೂ ಇದ್ದರು. ದೊರೆಯು ಸುರುಚಿಯ ಮೋಹಕ್ಕೆ ತುತ್ತಾಗಿ ಸುನೀತಿಯನ್ನು ಕಡೆಗಣಿಸಿದ್ದನು.

ಒಂದುದಿನ ಉತ್ತಾನಪಾದನು ಸಿಂಹಾಸನದ ಮೇಲೆ ಕುಳಿತಿರುವಾಗ, ಸುರುಚಿಯ ಮಗನಾದ ಉತ್ತಮನು ದೊರೆಯ ತೊಡೆಯನ್ನೇರಿ ಆನಂದಪಡುತ್ತಿದ್ದನು. ಮಹಾರಾಜನು ಅವನನ್ನು ಮುದ್ದಾಡುತ್ತಿದ್ದನು. ಅದನ್ನು ಕಂಡ ಧ್ರುವನು ತಾನೂ ತಂದೆಯ ತೊಡೆಯೇರಲು ಮುಂದಾದನು, ಅದನ್ನು ಕಂಡ ಸುರುಚಿ ಧಾವಿಸಿಬಂದು "ನಿಲ್ಲುನಿಲ್ಲು, ರಾಜನ ತೊಡೆಯೇರುವ ಆಸೆ ಇದ್ದರೆ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬರಬೇಕಷ್ಟೇ" ಎನ್ನುತ್ತಾ ಕೆಳಕ್ಕೆಳೆದುಬಿಟ್ಟಳು. ಸುರುಚಿಯ ಮೇಲಣ ಮೋಹದಿಂದ ಮಹಾರಾಜನೂ ಕೂಡ ಏನೊಂದು ಮಾತನಾಡದೆ ಸುಮ್ಮನಾದನು. ತನಗಾದ ಅಪಮಾನದಿಂದ ಧ್ರುವನು ತಾಯಿಯ ಬಳಿಸಾರಿ ಜೋರಾಗಿ ಅಳತೊಡಗಿದನು.

ಧ್ರುವನಿಗಾದ ದುಃಖವನ್ನು ತಡೆಯಲಾರದೆ ಶ್ರೀಮಾತೆಯವರೂ ಅಳಲಾರಂಭಿಸಿದರು. ವಾಚನಮಾಡುತ್ತಿದ್ದವನೂ ಅದನ್ನು ಕಂಡು ತತ್ಕಾಲಕ್ಕೆ ಓದುವುದನ್ನು ನಿಲ್ಲಿಸಿದನು. ಆಮೇಲೆ ಶ್ರೀಮಾತೆಯವರು ಕಣ್ಣೀರೊರೆಸಿಕೊಂಡು ಸಮಾಧಾನ ತಂದುಕೊಂಡರು.

ಆಮೇಲೆ ವಾಚನ ಮುಂದುವರಿಯಿತು. ಕೇವಲ 5 ವರ್ಷಗಳ ಬಾಲಕನಾದ ಧ್ರುವನು ತಾಯಿಯನ್ನು ಕುರಿತು "ಅಮ್ಮಾ, ನಾನು ಅರಣ್ಯಕ್ಕೆ ಹೋಗುತ್ತೇನೆ, ಮಾಹಾವಿಷ್ಣು ಕುರಿತು ತಪಸ್ಸು ಮಾಡಿ, ಅವನಿಂದ ಶಾಶ್ವತವಾದ ಸಿಂಹಾಸನವನ್ನು ಪಡೆದುಕೊಂಡು ಬರುತ್ತೇನೆ" ಎಂದು ಹೇಳುತ್ತಾ ಕಾಡಿನ ಹಾದಿಯನ್ನು ಹಿಡಿದುಬಿಟ್ಟನು. ತನ್ನ ಆನಂದದ ಏಕಮಾತ್ರ ಆಧಾರವಾಗಿದ್ದ ಕಂದನನ್ನು ಬಿಟ್ಟುಕೊಡುವುದು ಸುನೀತಿಗೆ ಇಷ್ಟವಿರಲಿಲ್ಲ. "ನನ್ನನ್ನು ಒಂಟಿಯಾಗಿಸಿ ಕಾಡಿಗೆ ಹೋಗಬೇಡ ಕಂದಾ, ನಿನ್ನ ಸಂಕಲ್ಪವನ್ನು ಬದಲಾಯಿಸು ಕಂದಾ" ಎಂದು ಸುನೀತಿಯು ಧ್ರುವನಿಗೆ ಪರಿಪರಿಯಾಗಿ ಗೋಳಾಡುತ್ತಾ ಹೇಳಿದಳು. ಧ್ರುವನಾದರೋ ತನ್ನ ನಿರ್ಧಾರದಲ್ಲಿ ಅಚಲನಾಗಿದ್ದನು.

ಸುನೀತಿಗಾದ ಸಂಕಟವನ್ನು ತಡೆಯಲಾರದೆ ಶ್ರೀಮಾತೆಯವರು ಮತ್ತೆ ದುಃಖಿತೆಯಾಗಿಬಿಟ್ಟರು. ತಾವೇ ಸುನೀತಿಯೇನೋ ತಮ್ಮ ಕಂದನೇ ಕಾಡುಪಾಲಾಗಿ ಬಿಡುತ್ತಿದ್ದಾನೇನೋ ಎನ್ನುವಷ್ಟು ಭಾವೋದ್ವೇಗಕ್ಕೆ ತುತ್ತಾಗಿ ಹೋ ಎಂದು ರೋದಿಸತೊಡಗಿದರು. ಗಲ್ಲದ ಮೇಲಿಂದ ದುಃಖಾಶ್ರುಗಳು ಧಾರಾಕಾರವಾಗಿ ಸುರಿಯತೊಡಗಿದವು. ಶ್ರೀಮಾತೆ ಸ್ವಲ್ಪ ಸಮಾಧಾನ ಮಾಡಿಕೊಂಡ ಬಳಿಕ ಮತ್ತೆ ವಾಚನವು ಮುಂದುವರಿಯಿತು.

ಭಯಂಕರವಾದ ಕಾಡಿನ ಮಧ್ಯೆ ಆ ಪುಟ್ಟ ಬಾಲಕನು ಮಹಾವಿಷ್ಣುವನ್ನು ಒಲಿಸಿಕೊಳ್ಳಲು ಹೋಗುತ್ತಿದ್ದಾನೆ ಎಂಬ ವಿವರಗಳು ಬಂದಾಗಲೂ ಶ್ರೀಮಾತೆ ಕುಸಿದುಹೋದರು. ಅಲ್ಲಿಂದ ಮುಂದಕ್ಕೆ ನಾರದರು ಪ್ರತ್ಯಕ್ಷರಾಗಿ ಬಾಲಕನನ್ನು ಸಂತೈಸಿ, ಅವನಿಗೆ ಸೂಕ್ತವಾಗಿ ಮಾರ್ಗದರ್ಶನ ಮಾಡಿದರು ಎಂಬ ವಿವರಣೆ ಬಂದಾಗ ಮಾತೆಯವರ ಹೃದಯವು ಆನಂದದಿಂದ ಅರಳಿತು. ಅವರ ತುಟಿಗಳ ಮೇಲೆ ಮಂದಹಾಸವು ಮಿನುಗಿತು. "ಭಗವಂತನು ಹೇಗೆ ಸಕಾಲಕ್ಕೆ ತನ್ನ ಕೃಪೆಯನ್ನು ಸುರಿಸುತ್ತಾನೆ ನೋಡಿ, ಯಾರಿಗೆ ಅವನು ಬೇಕಾಗಿದ್ದಾನೋ ಅವರಿಗೆ ಅವನು ಹೇಗೆ ಸಹಾಯ ಮಾಡುತ್ತಾನೆ ನೋಡಿ" ಎಂದು ಇಮ್ಮಡಿ ಉತ್ಸಾಹದಿಂದ ಅಲ್ಲಿ ನೆರೆದಿದ್ದವರಿಗೆ ಹೇಳಿದರು.

ಮತ್ತೆ ಕಥೆಯ ಓದುಗಾರಿಕೆ ಮುನ್ನಡೆಯಿತು. ತಪೋನಿರತನಾದ ಬಾಲಕನು ಕ್ರೂರಮೃಗಗಳು ತುಂಬಿದ್ದ ಆ ಗೊಂಡಾರಣ್ಯದಲ್ಲಿ ಏಕಾಂಗಿಯಾಗಿ, ನಿಸ್ಸಹಾಯಕನಾಗಿ ಭಯಗ್ರಸ್ತನಾಗಿ ಅಳತೊಡಗಿದನು ಎಂಬುದನ್ನು ಆಲಿಸುತ್ತಿದ್ದಂತೆಯೇ ಶ್ರೀಮಾತೆಯವರ ಹೃದಯವು ಪುನಃ ದುಃಖದಿಂದ ತುಂಬಿಹೋಯಿತು. ಕಣ್ಣೀರಿನ ಪ್ರವಾಹವನ್ನೇ ಹರಿಸತೊಡಗಿದರು. ನಿಂತುನಿಂತು ಕಥಾವಾಚನವು ಮುಂದುವರಿಯುತ್ತಿತ್ತಾದರೂ ಆ ಪುಟ್ಟಬಾಲಕನ ಕಂಗೆಟ್ಟ ಚಿತ್ರವೇ ಕಣ್ಣಮುಂದೆ ಬಂದು ನಿಂತಂತಾಗಿ, ಶ್ರೀಮಾತೆಯವರು ರೋದಿಸುತ್ತಲೇ ಇದ್ದರು. ರಾತ್ರಿಯ ಈ ಕತ್ತಲೆಯಲ್ಲಿ ಶ್ರೀಮಾತೆಯವರು ಧ್ರುವನ ರಕ್ಷಣೆಗಾಗಿ ಕಾಡಿಗೆ ಓಡಿಹೋಗಿ ಬಿಡುತ್ತಾರೇನೋ ಎನ್ನುವಂತಹ ವಾತಾವರಣ ಸೃಷ್ಟಿಯಾಗಿ ಬಿಟ್ಟಿತು. ಶ್ರೀಮಾತೆಯವರ ದುಃಖಾತಿರೇಕವನ್ನು ಕಂಡು ನೆರೆದಿದ್ದವರೆಲ್ಲರೂ ಮೂಕವಿಸ್ಮಿತರಾಗಿಬಿಟ್ಟರು. ಅವರ ಕಣ್ಣಂಚುಗಳಲ್ಲಿಯೂ ನೀರು ತುಳುಕಿತು. ಧ್ರುವನ ಕಥೆಯು ಕೊನೆಮುಟ್ಟದೆ ಅಲ್ಲಿಗೇ ನಿಂತುಹೋಯಿತು. ಶ್ರೀಮಾತೆಯವರ ಕುಸುಮಕೋಮಲವಾದ ಹೃದಯಕ್ಕೆ ಧ್ರುವಚರಿತ್ರೆಯು ಕನ್ನಡಿಯನ್ನು ಹಿಡಿದಂತಿತ್ತು.

## ಅಂತ್ಯಕಾಲ ಮತ್ತು ಅಂತಿಮೋಪದೇಶ

ಶ್ರೀಮಾತೆಯವರು ಉದ್ಬೋಧನದಲ್ಲಿದ್ದಷ್ಟು ಕಾಲವೂ ಬೇಕಾದಷ್ಟು ಜನರಿಗೆ ಮಂತ್ರದೀಕ್ಷೆಯನ್ನಿತ್ತು ಹರಸಿದರು. ತಮ್ಮ ತಪೋಬಲದಿಂದ ಬೇಕಾದಷ್ಟು ಜನರನ್ನು ದುಃಖಸಾಗರದಿಂದ ಮೇಲೆತ್ತಿದರು. ದೈಹಿಕವಾಗಿ ಅನೇಕರ ಸೇವೆ ಮಾಡಿ, ಅವರ ಬಾಳನ್ನು ಬೆಳಗಿಸಿದರು. ಅನೇಕರನ್ನು ತಮ್ಮ ಅಮೃತೋಪಮವಾದ ಉಪದೇಶಗಳಿಂದ ಸರಿದಾರಿಗೆ ತಂದರು. ಪರಮಹಂಸರ ನೇರಶಿಷ್ಯರು ಸೇರಿದಂತೆ ಅನೇಕ ಸನ್ಯಾಸಿಗಳಿಗೆ ಮಾರ್ಗದರ್ಶನ ಮಾಡಿ ಅವರನ್ನು ಸಾಧನೆಗೆ ಮತ್ತು ಲೋಕಸೇವೆಗೆ ಅಣಿಗೊಳಿಸಿದರು. ಪಾಪನಾಶಿನಿಯಾಗಿ ಅನೇಕರ ಪಾಪಗಳನ್ನು ತಾವೇ ಹೊತ್ತು ಜೀರ್ಣಿಸಿಕೊಂಡರು. ತಮ್ಮ ದಯಾಪರತೆ, ಕರುಣೆ, ಅನುಕಂಪ, ಪ್ರೀತಿ, ವಾತ್ಸಲ್ಯ, ಪರೋಪಕಾರತೆ, ಸಹನಶೀಲತೆ, ಆಚಾರಶೀಲತೆ, ಉದಾರತೆ, ಕಷ್ಟಸಹಿಷ್ಣುತೆ, ನಿರಾಡಂಬರತೆ, ಧೈವಭಕ್ತಿ, ದೇಶಭಕ್ತಿ, ತ್ಯಾಗಶೀಲತೆ, ಪ್ರಗತಿಶೀಲ ಮನೋಧರ್ಮ, ಶ್ರಮಜೀವನ, ಸ್ತ್ರೀಪರವಾದ ಕಾಳಜಿ, ಪರಮಹಂಸರಲ್ಲಿ ನಿಷ್ಠೆ, ಅಘಟಿತ ಘಟನಾ ಸಾಮರ್ಥ್ಯ ಮುಂತಾದ ಅನೇಕಾನೇಕ ದೈವಸಂಪತ್ತಿನಿಂದ ಸಾವಿರಾರು ಜನರ ಮೇಲೆ ತಮ್ಮ ಪುಣ್ಯಪ್ರಭಾವವನ್ನು ಬೀರಿದರು. ಆಗೊಮ್ಮೆ ಈಗೊಮ್ಮೆ ಕೆರಳಿದ ಕಾಳಿಯಂತಾಗಿ ತಮ್ಮ ಉಗ್ರರೂಪವನ್ನು ತೋರಿಸಿಬಿಟ್ಟರು.



ಹೀಗೆ ಆತ್ಮಸಾಧನೆ ಮತ್ತು ಲೋಕಹಿತಸಾಧನೆಗಳಲ್ಲಿಯೇ ತತ್ಪರರಾಗಿದ್ದ ಶ್ರೀಮಾತೆಯವರಿಗೆ 67 ವರ್ಷಗಳಾದವು. ಒಂದೇ ಎರಡೇ – ಹಲವು ಹತ್ತು ಕಾರಣಗಳು ಕೂಡಿಕೊಂಡು ಅವರ ಕಾಯವು ಜರ್ಜರಿತವಾಗಿಬಿಟ್ಟಿತು. ಕಾಯವನ್ನು ಕಳಚುವ ಕಾಲ ಸನ್ನಿಹಿತವಾಗಿಯೇ ಬಿಟ್ಟಿತು. ಆ ಹೊತ್ತಿನಲ್ಲಿ ಶ್ರೀಮಾತೆಯವರು ಉದ್ಬೋಧನದಿಂದ ಜಯರಾಮಬಾಟಿಯ ಸಂದರ್ಶನಕ್ಕೆಂದು ಹೋಗಿದ್ದರು. ಆಗಲೇ ಅಲ್ಲಿ ಜ್ವರಪೀಡಿತರಾಗಿ ಮಲಗಿಬಿಟ್ಟರು. ಅದು ಮಲೇರಿಯಾಜ್ವರದ ಒಂದು ಕ್ರೂರವಾದ ರೂಪವೆಂದು ತಿಳಿಯಿತು. ಗ್ರಾಮದಲ್ಲಿ ಚಿಕಿತ್ಸೆಗಳು ಫಲಿಸದೆ ಶ್ರೀಮಾತೆಯವರನ್ನು ಉದ್ಬೋಧನಕ್ಕೆ ಕರೆತಂದರು. ಇಲ್ಲಿಯೂ ಚಿಕಿತ್ಸೆಗಳಿಂದ ಹೆಚ್ಚಿನ ಲಾಭವೇನೂ ಆಗಲಿಲ್ಲ.

ಅವತಾರವನ್ನೂ ಸಮಾಪ್ತಿಗೊಳಿಸಬೇಕು, ಸಕಲ ಬಂಧನಗಳಿಂದಲೂ ಬಿಡುಗಡೆಗೊಳ್ಳಬೇಕು– ಅದಕ್ಕಾಗಿ ಶ್ರೀಮಾತೆಯವರು ರಾಧಿಯ ಮೇಲಿನ ಮೋಹದಿಂದ ತಮ್ಮ ಮನಸ್ಸನ್ನು ಹಿಂದಕ್ಕೆಳೆದುಕೊಂಡು ಬಿಟ್ಟರು. ರಾಧಿಯು ಜಯರಾಮಬಾಟಿಗೆ ಹೋಗುವುದೇ ಲೇಸು ಎಂದು ಹೇಳಿಬಿಟ್ಟರು.

ಶ್ರೀಮಾತೆಯವರ ಮಹಾಸಮಾಧಿಗೆ ಐದು ದಿನಗಳಷ್ಟೇ ಇರುವಾಗ ಅವರು ಮಲಗಿದ್ದ ಕೊಠಡಿಗೆ ಅನ್ನಪೂರ್ಣೆ ತಾಯಿ ಎಂಬ ಹಿರಿಯ ಭಕ್ತೆಯೊಬ್ಬಳು ಬಂದು ಅವರ ಮುಂದೆ ಕುಳಿತು "ಪರಮಹಂಸರ ಕಾಲಾನಂತರ ನೀವೇ ನಮಗೆಲ್ಲಾ ಭರವಸೆಯ ಬೆಳಕಾಗಿದ್ದೀರಿ. ನಮ್ಮ ಕಷ್ಟಕೋಟಲೆಗಳನ್ನೆಲ್ಲಾ ನಿಮ್ಮ ಮುಂದೆ ಸುರಿದು, ಅದಕ್ಕೆ ಪ್ರತಿಯಾಗಿ ನೀವು ಹೇಳುತ್ತಿದ್ದ ಭರವಸೆಯ ಮಾತುಗಳಿಂದ ಹೇಗೋ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದೆವು, ನೀವು ಕಣ್ಮರೆಯಾದ ಮೇಲೆ ನಮಗಾರು ಗತಿ" ಎಂದು ಪ್ರಲಾಪಿಸತೊಡಗಿದಳು.

ಆಗ ಶ್ರೀಮಾತೆಯವರು ಅ ಭಕ್ತೆಯನ್ನು ಕುರಿತು "ನೀನು ಶ್ರೀರಾಮಕೃಷ್ಣರನ್ನು ನೋಡಿದವಳಲ್ಲವೇ? ಅವರ ಕೃಪೆ ಅನವರತವೂ ನಿನ್ನ ಮೇಲೆ ಇರುವಾಗ ಭಯಪಡಲು ಕಾರಣವೇನಿದೆ" ಎಂದು ಸಂತೈಸಿದರು. ತರುವಾಯ ಸಕಲಲೋಕಗಳಿಗೂ ಬೇಕಾಗುವಂತಹ ದಿವ್ಯೋಪದೇಶವೊಂದನ್ನು ಅಕೆಯ ನೆಪದಿಂದ ಜಗತ್ತಿಗೆ ನೀಡಿದರು. "ಮಗಳೇ, ನಿನಗೊಂದು ಮಾತು ಹೇಳುತ್ತೇನೆ ಕೇಳು! ನಿನಗೇನಾದರೂ ಬದುಕಿನಲ್ಲಿ ಮನಃಶಾಂತಿ ಎನ್ನುವುದು ಬೇಕಿದ್ದ ಪಕ್ಷದಲ್ಲಿ ಇನ್ನೊಬ್ಬರಲ್ಲಿ ದೋಷವನ್ನು ಹುಡುಕಬೇಡ, ಒಂದುವೇಳೆ ದೋಷವನ್ನು ಹುಡುಕಲೇ ಬೇಕೆಂದೆನಿಸಿದರೆ ನಿನ್ನೊಳಗೆ ಇರುವ ದೋಷವನ್ನು ಹುಡುಕಿಕೋ. ನೋಡು ಮಗಳೇ, ಈ ಇಡೀ ಜಗತ್ತನ್ನೇ ನಿನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಕಲಿತುಕೋ. ಪರಕೀಯರೆಂಬುವವರು ಇಲ್ಲಿ ಯಾರೂ ಇಲ್ಲ. ಈ ಇಡೀ ಜಗತ್ತೇ ನಿನ್ನದು" ಎಂದು ಶ್ರೀಮಾತೆ ಉಪದೇಶಿಸಿದರು. ಈ ಉಪದೇಶವನ್ನು ಸ್ವಾಮಿ ಹರ್ಷಾನಂದಜೀ ಮಹಾರಾಜರು ಒಂದು ಸಂಸ್ಕೃತ ಶ್ಲೋಕವನ್ನಾಗಿಯೂ, ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜರು ಒಂದು ಕನ್ನಡ ಚತುಷ್ಪದಿಯನ್ನಾಗಿಯೂ ಸಾರಗ್ರಾಹಿಯಾಗುವಂತೆ ಮಾಡಿದ್ದಾರೆ.

ಶ್ರೀಮಾತೆಯವರು ಈ ಪರಿಯ ಉಪದೇಶ ಮಾಡುವುದಕ್ಕೂ ತಮ್ಮನ್ನು ಸಿದ್ಧಗೊಳಿಸಿಕೊಂಡಿದ್ದರು. ಬೃಂದಾವನಕ್ಕೆ ಹೋದಾಗ ಅಲ್ಲಿ ಸಂದರ್ಶಿಸಿದ ಕೃಷ್ಣದೇವಾಲಯಗಳಲ್ಲಿ 'ಬಾಂಕೆಬಿಹಾರಿ' ಎಂಬ ಹೆಸರಿದ್ದು, ಕತ್ತು, ಸೊಂಟ ಮತ್ತು ಮೊಣಕಾಲುಗಳನ್ನು ಅಂದವಾಗಿ ಬಾಗಿಸಿಕೊಂಡು ಕೊಳಲೂದುವ ಶ್ರೀಕೃಷ್ಣನ ಭಂಗಿಗೆ 'ತ್ರಿಭಂಗಿ' ಎಂದು ಹೆಸರು. ಅಂತಹ ಕೃಷ್ಣರೂಪಕ್ಕೆ ಬಾಂಕೆಬಿಹಾರಿ ಎಂದು ಹೆಸರು. ಬಿಹಾರಿ ಎಂದರೆ ಹಿಂದಿ ಭಾಷೆಯಲ್ಲಿ 'ಕೃಷ್ಣ' ಎಂದೇ ಅರ್ಥ. ಆ ಬಾಂಕೆಬಿಹಾರಿ ದೇವಾಲಯದಲ್ಲಿ ಶ್ರೀಮಾತೆಯವರು ಶ್ರೀಕೃಷ್ಣನನ್ನು ಕುರಿತು "ಹೇ ಸ್ವಾಮಿ, ನಿನ್ನ ಶರೀರವು ತ್ರಿಭಂಗಿಯಲ್ಲಿ ವಕ್ರವಾಗಿದೆ. ಆದರೆ ನಿನ್ನ ಮನಸ್ಸು ಮಾತ್ರ ನೇರವಾಗಿದೆ. ಹಾಗೆಯೇ ನನ್ನ ಮನಸ್ಸನ್ನು ನೇರವಾಗಿರಿಸು. ಪರರಲ್ಲಿ ದೋಷಗಳನ್ನು ಕಾಣುವ ಸ್ವಭಾವವನ್ನು ನನ್ನ ಮನಸ್ಸಿನಿಂದ ತೆಗೆದುಹಾಕು"ಎಂದು ಪ್ರಾರ್ಥಿಸಿದ್ದರು. ದಕ್ಷಿಣೇಶ್ವರದಲ್ಲಿ ಶ್ರೀಮಾತೆಯವರು ಧ್ಯಾನಕ್ಕೆ ಕುಳಿತಾಗ ಶುಕ್ಲಪಕ್ಷದ ಚಂದ್ರನ ಬೆಳದಿಂಗಳು ಅವರ ಮೇಲೆ ಬೀಳುತ್ತಿತ್ತು. ಆಗ ಅವರು ಭಗವಂತನನ್ನು ಕುರಿತು "ಸ್ವಾಮಿ, ಚಂದ್ರನಲ್ಲಾದರೂ ಕಲೆಗಳಿವೆ, ಆದರೆ ಅವನ ಬೆಳದಿಂಗಳು ಮಾತ್ರ ಶುಭ್ರವಾಗಿದೆ. ಚಂದ್ರಕಿರಣಗಳಂತೆ ನನ್ನ ಮನಸ್ಸನ್ನು ಶುಭ್ರವಾಗಿರಿಸು" ಎಂದು ಪ್ರಾರ್ಥಿಸುತ್ತಿದ್ದರು.

ಸ್ವಾಮಿ ಹರ್ಷಾನಂದಜೀ ಮಹಾರಾಜರು ಮತ್ತು ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜರು ಪದ್ಯರೂಪವಾಗಿಸಿರುವ ಆ ಉಪದೇಶವನ್ನಿಲ್ಲಿ ಬರೆಯುತ್ತೇನೆ.

**ಮಾ ಭೀಸ್ತ್ವಂ ಮಹಿತ: ಕೃಪಾ ಹೃಧಿಗತಾ ಶ್ರೀರಾಮಕೃಷ್ಣಸ್ಯ ಸಾ**
**ಶಾಂತೀಚ್ಛಾ ಯದಿತೇ ಕದಾಪಿ ಪರಭಿದ್ರಾನ್ವೇಷಣಂ ಮಾ ಕುರು !**
**ಶ್ರೇಯೋರ್ಥಂ ಕುರುತೇ ಸುಪುತ್ರಿ ಸತತಂ ತ್ವದ್ದೋಷ ಸಮ್ಮಾರ್ಗಣಂ**
**ಯಸ್ಮಾತ್ ಸರ್ವ ಜನಸ್ತ್ವವೈವ ಭುವನಂ ನೈಜಾಯಿತವ್ಯಂ ಮುದಾ ॥**

**ಶಾಂತಿಯನ್ನರಸುವೊಡೆ ಪರದೋಷವೆಣಿಸದಿರು**
**ನಿನ್ನ ದೋಷಗಳನ್ನೆ ನೀ ಕಂಡುಕೋ ।**
**ಬಿತ್ತರದ ಜಗದಲ್ಲಿ ಅನ್ಯರಾದರೂ ಇಲ್ಲ**
**ಎಲ್ಲರೂ ನಿನ್ನವರೆ ಇದನರಿತುಕೋ ॥**

ಶ್ರೀಮಾತೆಯವರ ಈ ಚರಮೋಪದೇಶಕ್ಕೆ ಅಮೂಲ್ಯವಾದ ಮಹತ್ವವಿದೆ. ಅದೇ ಕಾರಣವಾಗಿ ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜರು ಮತ್ತು ಸ್ವಾಮಿ ಹರ್ಷಾನಂದಜೀ ಮಹಾರಾಜರು ಅದರ ಮೇಲೆ ವಿಶೇಷವಾದ ಬೆಳಕು ಚೆಲ್ಲಿದ್ದಾರೆ.

1. ಶ್ರೀರಾಮಕೃಷ್ಣ ಪರಮಹಂಸರ ದಿವ್ಯನಾಮವನ್ನು ನೆನೆಯುತ್ತಿದ್ದರೆ ಸಾಕು, ನಮ್ಮ ಕಷ್ಟಕಾರ್ಪಣ್ಯಗಳೆಲ್ಲವೂ ದೂರವಾಗಿ, ಅಂತರಂಗದಲ್ಲಿ ಶಾಂತಿ ನೆಲೆಸುತ್ತದೆ, ನಿರ್ಭಯತೆ ಮೂಡುತ್ತದೆ.
2. ಇತರರಲ್ಲಿ ದೋಷಗಳನ್ನೇ ಎಣಿಸುತ್ತಿದ್ದರೆ ನಮ್ಮ ಮನಸ್ಸು ಮಲಿನವಾಗಿ ಬಿಡುತ್ತದೆ, ಅದೊಂದು ದೋಷಗಳು ತುಂಬಿದ ಕಸದಬುಟ್ಟಿಯಂತಾಗಿಬಿಡುತ್ತದೆ. ಒಳ್ಳೆಯದನ್ನು ಗುರುತಿಸುವ ಸ್ವಭಾವವನ್ನೇ ಕಳೆದುಕೊಂಡುಬಿಡುತ್ತೇವೆ. ದೋಷಗಳನ್ನು ಹುಡುಕುವುದನ್ನು ತೊರೆದರೆ ಮನಸ್ಸು ನೆಮ್ಮದಿಯಿಂದ ತುಂಬಿ ಶಾಂತವಾಗಿರುತ್ತದೆ.
3. ಮಾನವಜನ್ಮಕ್ಕೆ ಬಂದ ಬಳಿಕ, ತ್ರಿಗುಣಗಳೇ ಕಾರಣವಾಗಿ ಸರ್ವರೂ ಅತ್ಯಲ್ಪ ಪ್ರಮಾಣದಲ್ಲಾದರೂ ಸರಿಯೇ, ದೋಷಕ್ಕೆ ತುತ್ತಾಗಿಯೇ ಇರುತ್ತಾರೆ. ಹಾಗಾಗಿ ನಮ್ಮಲ್ಲಿಯೂ ದೋಷಗಳು ಮನೆಮಾಡಿಕೊಂಡೇ ಇರುತ್ತವೆ. ದೋಷಗಳನ್ನು ಹುಡುಕಲೇಬೇಕು ಎಂದೆನಿಸಿದರೆ, ನಮ್ಮಲ್ಲಿಯೇ ಇರುವ ದೋಷಗಳನ್ನು ಹುಡುಕಿಕೊಳ್ಳುವುದು ಒಳ್ಳೆಯದು. "ಗುಲಗಂಜಿಗೆ ತನ್ನ ಕಪ್ಪು ತಿಳಿಯದು" ಎಂಬೊಂದು ಗಾದೆಯಿದೆ. ಗುಲಗಂಜಿ ಕೆಂಪುಬಣ್ಣಕ್ಕಿದ್ದರೂ ಅದರ ತಲೆಯಮೇಲೆ ಸ್ವಲ್ಪಭಾಗ ಕಪ್ಪಾಗಿರುತ್ತದೆ. ಅದನ್ನರಿಯದೆ ಗುಲಗಂಜಿಯು "ನಾನು ಸಂಪೂರ್ಣವಾಗಿ ಕೆಂಪಾಗಿಯೇ ಇದ್ದೇನೆ" ಎಂದು ತಿಳಿದುಕೊಂಡಿರುತ್ತದೆ. ನಮ್ಮ ದೋಷಗಳನ್ನೇ ನಾವು ಕಂಡುಕೊಂಡೆವಾದರೆ, ಆಗ ಅವನ್ನು ತಿದ್ದಿಕೊಳ್ಳುವತ್ತ ಮನಸ್ಸು ಕೊಡಬಹುದು. ಈ ಸಂದರ್ಭಕ್ಕೆ ಬಸವಣ್ಣನವರ ವಚನವೊಂದು ಚೆನ್ನಾಗಿ ಹೊಂದುತ್ತದೆ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ**
**ನಮ್ಮ ಕೂಡಲಸಂಗಮದೇವ॥**

ಮೊದಲು ನಮ್ಮ ದೋಷಗಳನ್ನು ತಿದ್ದಿಕೊಳ್ಳಬೇಕು, ಮೊದಲು ನಮ್ಮ ಮನೆಯ ದುಃಖವನ್ನು ದೂರಮಾಡಿಕೊಳ್ಳಬೇಕು. ಆಮೇಲೆ ಲೋಕವನ್ನು ತಿದ್ದುವ, ಲೋಕದ ದುಃಖವನ್ನು ದೂರಮಾಡುವ ವಿಚಾರ! ಕಬೀರದಾಸರು ತಮ್ಮೊಂದು ಪದ್ಯದಲ್ಲಿ ಮನುಷ್ಯನು ತನ್ನನ್ನು ಬಿಟ್ಟೇ ಇತರರ ದೋಷಗಳನ್ನು ನೋಡುವುದರಲ್ಲಿ ತತ್ಪರನಾಗುತ್ತಾನೆಂದು ವ್ಯಂಗ್ಯವಾಡಿದ್ದಾರೆ. ಮೂಲಪದ್ಯವನ್ನೂ ತರುವಾಯ ನನ್ನ ಅನುವಾದವನ್ನೂ ಇಲ್ಲಿ ಬರೆಯುತ್ತೇನೆ.

**ದೋಷ ಪರಾಯೇ ದೇಖಿಕೈ । ಚಲ್ಯೈ ಹಸಂತ್ ಹಸಂತ್ ।**
**ಆಪನ ಯಾದ ನ ಆವಯೀ । ಜಿನಕಾ ಆದಿ ನ ಅಂತ್ ॥**
**ನೋಡುತ ಅನ್ಯರ ದೋಷಗಳ । ನಕ್ಕುನಗುತಲೇ ಸಾಗಿದನು ।**
**ತನ್ನದು ನೆನಪಿಗೆ ಬರಲೇಯಿಲ್ಲ । ತುದಿಮೊದಲೆಂಬುದೇ ಅದಕ್ಕಿಲ್ಲ ॥**

4. ಜಗತ್ತಿನಲ್ಲಿರುವ ಎಲ್ಲರನ್ನೂ ನಮ್ಮಂತೆ ಕಾಣಬೇಕು, ಇಲ್ಲಿ ಪರಕೀಯರೆಂಬುವವರು ಯಾರೂ ಇಲ್ಲ."ಆತ್ಮವತ್ ಸರ್ವಭೂತಾನೆ । ಯಃ ಪಶ್ಯತಿ ಸ ಪಂಡಿತ:" – ಸಕಲ ಭೂತಕೋಟಿಗಳನ್ನೂ ತನ್ನಂತೆ ಕಾಣುವವನು ಜ್ಞಾನಿಯೆನಿಸುತ್ತಾನೆ – ಎಂಬೊಂದು ಆರ್ಯೋಕ್ತಿಯಿದೆ. ನಮ್ಮೊಳಗಿರುವ ಆತ್ಮತತ್ವವೇ ಎಲ್ಲಾ ಭೂತರಾಶಿಗಳನ್ನೂ ತುಂಬಿಕೊಂಡಿದೆ. "ಸರ್ವಂ ಖಲ್ವಿದಂ ಬ್ರಹ್ಮ"– ಈ ಕಾಣುವುದೆಲ್ಲಾ ಬ್ರಹ್ಮಸ್ವರೂಪವೇ ಎಂಬ ನೆಲೆಯಲ್ಲಿ ಎಲ್ಲರೂ ನಮ್ಮೊಳಗೆ ಇದ್ದಾರೆ. ಇನ್ನೊಬ್ಬರ ಮೇಲೆ ದೋಷಾರೋಪಣ ಮಾಡಿದರೆ, ಅದು ನಮ್ಮ ಮೇಲೆಯೇ ದೋಷಾರೋಪಣ ಮಾಡಿಕೊಂಡಂತೆ ಆಗುತ್ತದೆ. ಆದ್ದರಿಂದ ಯಾರ ಮೇಲೂ ದೋಷ ಹೊರಿಸುವ ಕುಕರ್ಮವನ್ನು ಮಾಡಬಾರದು. ನಮಗೆ ಆಗದವರ ಮೇಲೆ ತಪ್ಪು ಹೊರಿಸಿದರೆ "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎಂಬ ಗಾದೆಯಂತಾಗುತ್ತದೆ. ಈ ಸಂದರ್ಭಕ್ಕೆ ಬಸವಣ್ಣನವರ ವಚನವೊಂದು ಅತ್ಯಂತ ಉಪಾದೇಯವಾಗಿದೆ:

**ಇವನಾರವ ಇವನಾರವ ಇವನಾರವ ಎನ್ನದಿರಯ್ಯ ।**
**ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ ।**
**ಕೂಡಲಸಂಗಮದೇವಯ್ಯ । ಇವ ನಮ್ಮ ಮನೆಮಗನೆಂದೆನಿಸಯ್ಯ ॥**

5. ಒಂದುವೇಳೆ ಯಾರಿಂದಲಾದರೂ ತಪ್ಪು ನಡೆದಿದ್ದರೆ, ಅವರು ಅಪಚಾರವೆಸಗಿದ್ದರೆ, ಅದನ್ನು ತಿದ್ದಿಕೊಳ್ಳುವಂತೆ ತಿಳಿವಳಿಕೆ ಕೊಟ್ಟು ಕ್ಷಮಿಸಿಬಿಡಬೇಕು. ಕ್ಷಮೆಯೆಂಬುದು ದೈವೀಗುಣ, ಆ ಗುಣವು ವ್ಯಕ್ತಿತ್ವದ ಉಜ್ವಲತೆಗೆ ನೆರವಾಗುತ್ತದೆ.
6. ಕೊನೆಯದಾಗಿ ಯಾರಲ್ಲಿಯೂ ತಪ್ಪುಗಳನ್ನು ಕಾಣಲೇಬಾರದೇ, ತಿದ್ದಲೇಬಾರದೇ ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಳ್ಳೋಣ, ದೋಷಗಳನ್ನು ಹುಡುಕಬಾರದು ಎಂದರೆ ಯಾರು ಏನು ಮಾಡಿದರೂ ಕಣ್ಣುಮುಚ್ಚಿಕೊಂಡು, ಬಾಯಿಮುಚ್ಚಿಕೊಂಡು ಇದ್ದುಬಿಡಬೇಕೇ ಎಂಬ ಪ್ರಶ್ನೆ ಮೂಡುತ್ತದೆ. ಅದಕ್ಕೆ ಉತ್ತರ ಹೀಗಿದೆ: ಗುರುಹಿರಿಯರು ತಮ್ಮ ಶಿಷ್ಯರಲ್ಲಾಗಲೀ, ತಂದೆ ತಾಯಿಗಳು ತಮ್ಮ ಮಕ್ಕಳುಮರಿಗಳಲ್ಲಾಗಲೀ ದೋಷಗಳನ್ನು ಕಂಡಾಗ ತಿದ್ದಲೇಬೇಕು. ಸಮಾಜದ ಹಿತದೃಷ್ಟಿಯಿಂದ ಮತ್ತು ವ್ಯಕ್ತಿಯ ವಿಕಾಸದ ದೃಷ್ಟಿಯಿಂದ ಈ ತಿದ್ದುವಿಕೆ ಅಗತ್ಯವಾಗಿ ಆಗಲೇಬೇಕು.

ಅವರು ದೊಡ್ಡ ಸಿರಿವಂತರು ಎಂಬ ಕಾರಣದಿಂದಲೋ, ಅವರು ದೊಡ್ಡ ವಿದ್ವಾಂಸರು ಎಂಬ ಕಾರಣದಿಂದಲೋ, ಅವರು ತುಂಬಾ ಕೀರ್ತಿಶಾಲಿಗಳಾಗಿದ್ದಾರೆ ಎಂಬ ಕಾರಣದಿಂದಲೋ ಹೊಟ್ಟೆಕಿಚ್ಚಿಗೆ ತುತ್ತಾಗಿ ಅವರ ಸದ್ಗುಣಗಳನ್ನು ಕಡೆಗಣಿಸಿ, ಅವರಲ್ಲಿ ದೋಷಗಳನ್ನು ಕಂಡು ಆಡಿಕೊಳ್ಳುವುದು ಸಲ್ಲದು ಎಂಬುದು ಈ ಉಪದೇಶದ ಅಂತರಾರ್ಥವಾಗಿದೆ. ಕೀಳರಿಮೆಗೆ ತುತ್ತಾಗಿ ಕೆಲವರು ಇನ್ನೊಬ್ಬರಲ್ಲಿ ದೋಷಗಳನ್ನು ಕಂಡು, ಅವರಿಗಿಂತ ತಾವೇ ಮೇಲು ಎಂದು ಸಾಧಿಸಲು ಪ್ರಯತ್ನಿಸುವುದು ಕೂಡ ಹುಳುಕುಗಳನ್ನೇ ಹುಡುಕುವುದಕ್ಕೆ ಕಾರಣವಾಗುತ್ತದೆ. ಹೀಗೆ ಶ್ರೀಮಾತೆಯವರ ಚರಮೋಪದೇಶವು ಹಲವು ಆಯಾಮಗಳಿಂದ ಉಪಾದೇಯವಾಗಿದೆ.

### ಮರಣಕಾಲದ ಸಂಕಟದ ಕ್ಷಣಗಳು

ಶ್ರೀಮಾತೆಯವರು ಮರಣಕಾಲಕ್ಕೆ ಸವೆದು ಚಿಪ್ಪಾಗಿ ಹೋಗಿದ್ದರು. ಎಲುಬು ಚರ್ಮಗಳ ತಡಿಕೆಯಾಗಿ ಬಿಟ್ಟಿದ್ದರು. ಅವರನ್ನು ಜಯರಾಮಬಾಟಿಯಿಂದ ಕರೆತಂದ ದಿನದಿಂದಲೇ ಸ್ವಾಮಿ ಶಾರದಾನಂದರು ಹಲವಾರು ಡಾಕ್ಟರುಗಳನ್ನು ಬರಮಾಡಿಕೊಂಡು, ತಮ್ಮ ಶಕ್ತಿಮೀರಿ ಚಿಕಿತ್ಸೆ ಮಾಡಿಸಿದರು. ಆದರೆ ಚಿಕಿತ್ಸೆಗಳು ಫಲಿಸಲಿಲ್ಲ. ಪಿತ್ತಕೋಶದ ಕೆರಳುವಿಕೆಯೇ ಕಾರಣವಾಗಿ ಶ್ರೀಮಾತೆಯವರ ಶರೀರದಲ್ಲಿ ಅಸಹನೀಯವಾದ ಉರಿ ಎದ್ದುಬಿಟ್ಟಿತು. "ನನ್ನ ದೇಹವನ್ನು ಕಳೆಬೆಳೆದ ಕೆರೆಯ ನೀರಿನಲ್ಲಿ ಮುಳುಗಿಸಿ ಬಿಡುತ್ತೇನೆ, ಉರಿಶಮನವಾಗುತ್ತದೇನೋ" ಎಂದು ಶ್ರೀಮಾತೆ ಸಂಕಟಪಡುತ್ತಿದ್ದರು.

ಕೊನೆಯುಸಿರೆಳೆಯುವ ಕಾಲ ಬಂದೇಬಿಟ್ಟಿತು. 1920ನೆಯ ಜುಲೈ ತಿಂಗಳು 21ನೆಯ ತಾರೀಖು ಮಂಗಳವಾರ ತಮ್ಮ 67ನೆಯ ವಯಸ್ಸಿನಲ್ಲಿ ಮಹಾಸಮಾಧಿಯಲ್ಲಿ ಮಗ್ನರಾಗಿ ಬಿಟ್ಟರು. ಅವರ ಶರೀರವನ್ನು ಉದ್ಬೋಧನದಿಂದ ಬೇಲೂರುಮಠದ ಗಂಗಾತೀರಕ್ಕೆ ತಂದು ಅಂತ್ಯಸಂಸ್ಕಾರವನ್ನು ನೆರವೇರಿಸಿದರು. ಗಂಗೆಯಲ್ಲಿ ಮೀಯಿಸಿ ಪೂಜಿಸುವ ಹೊತ್ತಿನಲ್ಲಿ ಅವರ ಮುಖಮಂಡಲದಿಂದ ಅಪೂರ್ವವಾದ ಕಾಂತಿಯ ಕಿರಣಗಳು ಹೊರಹೊಮ್ಮಿ ಆಗಸದಲ್ಲಿ ಲೀನವಾದವು. ಶ್ರೀಗಂಧದ ಕೊರಡುಗಳಿಂದ ಸಿದ್ಧಗೊಳಿಸಿದ ಚಿತೆಯಮೇಲೆ ಶ್ರೀಮಾತೆಯವರ ಶರೀರವನ್ನಿರಿಸಿದಾಗ, ಶಾರದಾನಂದರು ಅದಕ್ಕೆ ಅಗ್ನಿಸ್ಪರ್ಶ ಮಾಡಿದರು. ಕೊನೆಗೆ ಚಿತಾಭಸ್ಮವನ್ನು ತಾಮ್ರಘಟಕ್ಕೆ ತುಂಬಿಸಿಕೊಂಡರು. ದಕ್ಷಿಣೇಶ್ವರದ ಆ ತಾಣದಲ್ಲೀಗ ಶ್ರೀಮಾತೆಯವರ ದೇವಾಲಯವೊಂದು ನಿರ್ಮಾಣಗೊಂಡಿದೆ.

### ಶ್ರೀಮಾತೆಯವರ ಕೆಲವು ಹಿತೋಪದೇಶಗಳು

1. ಅನೇಕರು ಜಗತ್ತಿನಲ್ಲಿ ಚೆನ್ನಾಗಿ ಪೆಟ್ಟುಗಳನ್ನು ತಿಂದಮೇಲೆ ಭಗವಂತನೆಡೆಗೆ ಮನಸ್ಸನ್ನು ಹರಿಸುತ್ತಾರೆ. ಆದರೆ ಯಾರು ಬಾಲ್ಯದಿಂದಲೇ ಆಗತಾನೆ ಅರಳಿದ ಹೂವಿನಂತೆ ಶುಭ್ರವಾಗಿರುವ ತಮ್ಮ ಮನಸ್ಸನ್ನು ಭಗವಂತನಿಗೆ ಅರ್ಪಿಸಿಕೊಂಡಿರುತ್ತಾರೋ ಅವರೇ ನಿಜವಾದ ಧನ್ಯರು. ಯೌವನವಿರುವಾಗಲೇ ತ್ಯಾಗ ಮಾಡಬೇಕು.
2. ಹಿಂದಿನ ಕರ್ಮಗಳ ಫಲದಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಆದರೆ ಒಬ್ಬನು ಪ್ರಾರ್ಥನೆಯ ಜೀವನವನ್ನು ನಡೆಸುತ್ತಿದ್ದರೆ, ಅವನಿಗೆ ದೊಡ್ಡ ಗಾಯವಾಗುವುದಕ್ಕೆ ಬದಲಾಗಿ, ಕಾಲಿಗೆ ಒಂದು ಸಣ್ಣ ಮುಳ್ಳು ಚುಚ್ಚುವಂತಹ ಶಿಕ್ಷೆಯನ್ನು ಮಾತ್ರ ಅನುಭವಿಸುತ್ತಾನೆ.
3. ಎಲ್ಲಿಯವರೆಗೆ ಆಸೆಗಳು ಇರುತ್ತವೆಯೋ ಅಲ್ಲಿಯವರೆಗೆ ಹುಟ್ಟು ಸಾವುಗಳು ತಪ್ಪುವುದಿಲ್ಲ. ಜೀವವು ಒಂದಾದಮೇಲೊಂದರಂತೆ ದೇಹವನ್ನು ಧರಿಸಲು ಆಸೆಗಳೇ ಕಾರಣವಾಗುತ್ತವೆ. ಆಸೆಗಳು ಇರುವತನಕ ಪುನರ್ಜನ್ಮವು ಇದ್ದೇ ಇರುತ್ತದೆ.
4. ತೊಂದರೆಗಳು, ಕಷ್ಟಗಳು ಬರಬಾರದೆಂದು ನಿರೀಕ್ಷಿಸುವುದು ಸರಿಯಿಲ್ಲ. ಅವು ಬಂದೇ ಬರುತ್ತವೆ. ಆದರೆ ಭಕ್ತರಿಗೆ ಅವು ಕಾಲಿನ ಕೆಳಗೆ ನುಸುಳಿ ಹೋಗುವ ನೀರಿನಂತೆ ಹೊರಟುಹೋಗುತ್ತವೆ.
5. ಮೃತ್ಯು ಯಾವಾಗ ಬೇಕಾದರೂ ಬರಬಹುದು. ಅದು ಬರುವುದಕ್ಕೆ ಮುನ್ನವೇ, ಸದವಕಾಶ ಒದಗಿದಾಗ, ಶುಭಾಶುಭಕಾಲವನ್ನು ಲೆಕ್ಕಿಸದೆ ಒಳ್ಳೆಯ ಕೆಲಸವನ್ನು ಮಾಡಿ ಮುಗಿಸುವುದು ಲೇಸು.
6. ಕೆಳಕ್ಕೆ ಹರಿಯುವುದು ನೀರಿನ ಸ್ವಭಾವ; ಆದರೆ ಸೂರ್ಯನ ಕಿರಣಗಳು ಅದನ್ನು ಮೇಲಕ್ಕೊಯ್ಯುತ್ತವೆ. ಅಂತೆಯೇ ವಿಷಯಗಳಲ್ಲಿ ರಮಿಸುವುದು ಮನಸ್ಸಿನ ಪ್ರವೃತ್ತಿ: ಆದರೆ ದೈವೀಕೃಪೆ ಅದನ್ನು ಸದ್ವಸ್ತುವಿನ ಕಡೆಗೆ ತಿರುಗಿಸುತ್ತದೆ.
7. ಪ್ರಪಂಚದಲ್ಲಿ ಅನಾಸಕ್ತಿಯಿಂದ ಬದುಕಿದಷ್ಟೂ ನೆಮ್ಮದಿ ಹೆಚ್ಚು.
8. ಆತ್ಮಸಾಕ್ಷಾತ್ಕಾರವನ್ನು ಪಡೆದವರಿಗೆ ಏನು ಲಭಿಸುತ್ತದೆ? ಅವರಿಗೆ ಏನಾದರೂ ಒಂದು ಜೊತೆ ಕೊಂಬು ಬೆಳೆಯುವುದೇ ಇಲ್ಲ. ಅವರ ದೃಷ್ಟಿ ಬದಲಾವಣೆ ಆಗುತ್ತದೆ. ನಿತ್ಯಾನಿತ್ಯವಸ್ತು ವಿವೇಕ ಉಂಟಾಗುತ್ತದೆ. ಆತ್ಮಜ್ಞಾನ ಲಭಿಸುತ್ತದೆ. ಜನನ–ಮರಣಗಳ ಕೋಟಲೆಯಿಂದ ತಪ್ಪಿಸಿಕೊಂಡು ಚಿರಸಾಯುಜ್ಯ ಪದವಿಯನ್ನು ಹೊಂದುತ್ತಾರೆ.
9. ಜಪ, ಧ್ಯಾನ ಮತ್ತು ಸಾಧನೆಗಳಿಂದ ಹಿಂದಿನ ಪಾಪಗಳು ಪರಿಹಾರವಾಗುತ್ತವೆ.
10. ಒಬ್ಬನು ಕರ್ಮ ಮಾಡಲೇಬೇಕು. ಕರ್ಮದ ಮೂಲಕ ಮಾತ್ರವೇ ಒಬ್ಬನು ಕರ್ಮಬಂಧನದಿಂದ ಪಾರಾಗಬಲ್ಲ, ಕರ್ಮದಿಂದ ಅನಾಸಕ್ತಿ ಪಡೆಯಬಹುದು. ಒಂದು ಕ್ಷಣವಾದರೂ ಕೆಲಸವಿಲ್ಲದೆ ಸುಮ್ಮನೆ ಇರಬಾರದು.

(ಮುಗಿಯಿತು)



## ಶ್ರೀ ಚಾಮುಂಡೇಶ್ವರಿ ಜಯಂತಿ

ಮೈಸೂರು ಸಂಸ್ಥಾನದ ಒಡೆಯರ ಮನೆತನದ ಅಧಿದೇವತೆ ಶ್ರೀ ಚಾಮುಂಡೇಶ್ವರಿ. ಕನ್ನಡನಾಡಿಗೂ ಚಾಮುಂಡೇಶ್ವರಿಗೂ ಅವಿನಾಭಾವ ಸಂಬಂಧ, ಮೈಸೂರು ಸಂಸ್ಥಾನವನ್ನು ಆಳಿದ ಎಲ್ಲಾ ಒಡೆಯರಿಗೂ ಚಾಮುಂಡೇಶ್ವರಿ ದೇವಿಯ ಕೃಪಾಶೀರ್ವಾದ ಸದಾ ದೊರಕಿದೆ.

ಶ್ರೀ ಚಾಮುಂಡೇಶ್ವರಿ ಕುರಿತಂತೆ ಅಪಾರವಾದ ಸ್ತೋತ್ರ ಸಾಹಿತ್ಯ ಕರ್ನಾಟಕದಲ್ಲಿ ಲಭ್ಯವಿದೆ. ದಸರಾದ ಒಂಬತ್ತು ದಿನಗಳು ಅಂದರೆ ನವರಾತ್ರಿ ಹಬ್ಬ ಶ್ರೀ ಚಾಮುಂಡೇಶ್ವರಿ ದೇವಿಗೆ ಮೀಸಲಾಗಿದೆ. ದುಷ್ಟಶಕ್ತಿಗಳ ಸಂಹಾರಕಳಾದ ಚಾಮುಂಡೇಶ್ವರಿ ವ್ಯಕ್ತಿಗಳಲ್ಲಿ ಇರುವ ಸದ್ಗುಣಗಳನ್ನು ಬೆಳಕಿಗೆ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆಂದು ಭಕ್ತರು ನಂಬಿದ್ದಾರೆ. ಜುಲೈ 10ರಂದು ಶ್ರೀ ಚಾಮುಂಡೇಶ್ವರಿಯ ಜನ್ಮದಿನವಾಗಿದ್ದು, ಅಂದು ತುಮಕೂರಿನ ಶ್ರೀ ದುರ್ಗಾಂಬಿಕಾ ದೇವಿಯ ದೇವಾಲಯದಲ್ಲಿ ಚಂಡಿಕಾಹೋಮ, ದುರ್ಗಾ ಸಪ್ತಶತಿ ಮೊದಲಾದ ಧಾರ್ಮಿಕ ವಿಧಿಗಳನ್ನು ಡಾ.ಎಂ.ಆರ್.ಹುಲಿನಾಯ್ಕರ್, ಡಾ.ರಮಣ್ ಹುಲಿನಾಯ್ಕರ್ ಹಾಗೂ ಡಾ.ಲಾವಣ್ಯ ಹುಲಿನಾಯ್ಕರ್ ಅವರು ನೆರವೇರಿಸಿದರು.



Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**